ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ । ರಾಯಚೂರು । ಬಳ್ಳಾರಿ । ವಿಜಯನಗರ । ಯಾದಗಿರಿ । ಬೆಂಗಳೂರು । ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ.

ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 131 | Friday 04-10-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

# ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಉಚಿತ ವಿದ್ಯುತ್

● ವಾರ್ತಾಲೋಕ ವಾರ್ತೆ

**ಹೊಸಪೇಟೆ :** ಈಗಾಗಲೇ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಉಚಿತವಾಗಿ ವಿದ್ಯುತ್ ಸೌಲಭ್ಯವನ್ನು ಒದಗಿಸುವ ಬಗ್ಗೆ ದಿನಾಂಕ :01/10/2024 ರಂದು ಸುತ್ತೋಲೆಯ ಮತ್ತು ಆದೇಶ ಹೊರಡಿಸಲಾಗಿದ್ದು.

ಯೋಜನೆಯ ಅನುಷ್ಠಾನವು ಈಗಾಗಲೇ ಪ್ರಾರಂಭವಾಗಿದೆ. ಸದರಿ ಯೋಜನೆಯನ್ನು ಇನ್ನೂ ನಿಖರವಾಗಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದಿಂದ(EDCS) ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ತಂತ್ರಾಂಶವನ್ನು ಬಳಸಿಕೊಂಡು ಮುಖ್ಯೋಪಾಧ್ಯಾಯರುಗಳು ತಮ್ಮ ಶಾಲೆಯ ವಿದ್ಯುತ್ ಸಂಪರ್ಕದ ವಿವರವನ್ನು ಆನ್-ಲೈನ್‌ನಲ್ಲಿ ದಾಖಲಿಸಬೇಕಾಗಿದೆ.

ಶಾಲಾ ಶಿಕ್ಷಣ ಇಲಾಖೆಯ ಜಾಲತಾನವಾದ schooleducation.karnataka.gov.in ನಲ್ಲಿ " ಉಚಿತ ವಿದ್ಯುತ್ ಸಂಪರ್ಕಕ್ಕೆ ಮಾಹಿತಿ ನಮೂದಿಸಲು, ಸದರಿ ಲಿಂಕ್‌ನ ಮೇಲೆ ಕ್ಲಿಕ್ ಮಾಡಿ ಅರ್ಜಿ ಸಲ್ಲಿಸುವಂತೆ ಸೂಚಿಸಿದೆ. ಈ ಲಿಂಕ್ ಮೇಲೆ ಕ್ಲಿಕ್ ಮಾಡಿದ ತಕ್ಷಣ ಸೇವಾ ಸಿಂಧು ಪೋರ್ಟಲ್ ನ ವೆಬ್‌ಪೇಜ್ ತೆರೆದುಕೊಳ್ಳುತ್ತದೆ. ಈ ವೆಬ್‌ಪೇಜ್‌ನ ಮುಖಪುಟದಲ್ಲಿ ಈ ಕೆಳಕಂಡ ಕ್ರಮಗಳನ್ನು ಶಾಲೆಯ ಮುಖ್ಯಸ್ಥರು ನಿರ್ವಹಿಸಬೇಕಾಗಿರುತ್ತದೆ.




1. ಸಂಬಂಧಪಟ್ಟ ಸರ್ಕಾರಿ ಶಾಲೆಯ ಯು-ಡೈಸ್ ಸಂಖ್ಯೆಯನ್ನು ನಿಗದಿತ ಸ್ಥಳದಲ್ಲಿ ನಮೂದಿಸಿದಾಗ ಶಾಲೆಯ ಹೆಸರು, ವಿಳಾಸ ಮತ್ತು ಶಾಲೆಯ ಮುಖ್ಯೋಪಾಧ್ಯಾಯರ ಮೊಬೈಲ್ ಸಂಖ್ಯೆ ಹಾಗೂ ಶಾಲೆಗೆ ಸಂಬಂಧಿಸಿದ ವಿವರಗಳು ಪ್ರದರ್ಶಿತಗೊಳ್ಳುತ್ತವೆ. ಈ ವಿವರಗಳು ತಮ್ಮ ಶಾಲೆಗೆ ಸಂಬಂಧಿಸಿದವು ಎಂದು ಖಾತರಿ ಪಡಿಸಿಕೊಳ್ಳಬೇಕು.
2. ಸದರಿ ಯು-ಡೈಸ್ ಗೆ ಲಿಂಕ್ ಮಾಡಲಾಗಿರುವ ಮೊಬೈಲ್ ಸಂಖ್ಯೆ/ಶಾಲಾ ಮುಖ್ಯೋಪಾಧ್ಯಾಯರ ಮೊಬೈಲ್ ಸಂಖ್ಯೆಗೆ ಸ್ವೀಕೃತವಾಗುವ OTP(One Time Password)ಯನ್ನು ನಮೂದಿಸಿ, ದಾಖಲೆಗಳನ್ನು ಪರಿಶೀಲಿಸಿ ಗಿಚಿಟುಜಚಿಣಜ ಎಂಬ ಬಟನ್ ಮೇಲೆ ಕ್ಲಿಕ್ ಮಾಡಬೇಕು.
3. ತಮ್ಮ ಶಾಲೆಯು ಒಳಪಡುವ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ESCOM) ವನ್ನು ಆಯ್ಕೆ ಮಾಡಿಕೊಂಡು ಶಾಲೆಯ ವಿದ್ಯುತ್ ಬಿಲ್‌ನಲ್ಲಿ ನಮೂದಿಸಿರುವ ಅಕೌಂಟ್ ನಂಬರ್‌ನ್ನು ನಿಖರವಾಗಿ ಪರಿಶೀಲಿಸಿಕೊಂಡು ನಿಗಧಿತ ಸ್ಥಳದಲ್ಲಿ ನಿಖರವಾಗಿ ನಮೂದಿಸಬೇಕು.
4. ಮಾಹಿತಿ ನಿಖರವಾಗಿರುವ ಬಗ್ಗೆ ದೃಢೀಕರಣ ವಾಕ್ಯದ ಬಟನ್ ಕ್ಲಿಕ್ ಮಾಡಬೇಕು.
5. ಅಂತಿಮವಾಗಿ Captcha ವನ್ನು ಯಥಾಪ್ರಕಾರ ನಮೂದಿಸಿ Submit ಬಟನ್ ಮೇಲೆ ಕ್ಲಿಕ್ ಮಾಡಬೇಕು.
6. Acknowledgement ನ್ನು ಪಡೆದು, ಮುದ್ರಿಸಿ ಕಡತದಲ್ಲಿ ಸುರಕ್ಷಿತವಾಗಿಟ್ಟುಕೊಳ್ಳಬೇಕು.

ತಮ್ಮ ವ್ಯಾಪ್ತಿಯ ಸರ್ಕಾರಿ ಶಾಲೆಗಳ ಮುಖ್ಯೋಪಾಧ್ಯಾಯರುಗಳು ತಮ್ಮ ಶಾಲೆಯ ವಿದ್ಯುತ್ ಸಂಪರ್ಕದ ವಿವರಗಳನ್ನು ದಿನಾಂಕ: 10/10/2024ರೊಳಗೆ ತಪ್ಪದೇ ಭರ್ತಿ ಮಾಡುವಂತೆ ಕ್ರಮವಹಿಸಲು ಸೂಚಿಸಿದೆ. URL Link: https://sevasindhuservices.karnataka.gov.in/directApply.do?serviceId=2241

ಸೂಚನೆ:- ಈ ಬಗ್ಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಯಾವುದಾದರೂ ಸಂದೇಹಗಳಿದ್ದಲ್ಲಿ ಯೋಜನಾ ಶಾಖೆಯ ಕೆಳಕಂಡ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸುವುದು.

1. ಅಧಿಕ್ಷಕರು - 9448382062
2. ವಿಷಯ ನಿರ್ವಾಹಕರು - 8050320454

(ಕರೆ ಮಾಡಬೇಕಾದ ಸಮಯ : 10:00 AM - 05:30 PM)

ಎಂದು ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ವರದಿ ಎಲ್. ಮಂಜುನಾಥ**

## ಸಂಕ್ಷಿಪ್ತ ವಾರ್ತೆ

### ಕಾ ನಿ ಪ ಧ್ವನಿ ಸಂಘಟನೆಯ ಕಂಪ್ಲಿ ತಾಲೂಕಿನ ಅಧ್ಯಕ್ಷರಾಗಿ ಇಂದ್ರಜಿತ್ ಸಿಂಗ್ ನೇಮಕ



● ವಾರ್ತಾಲೋಕ ವಾರ್ತೆ

ಕಂಪ್ಲಿ : ಅ3 ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಬಂಗ್ಲಿ ಮಲ್ಲಿಕಾರ್ಜುನ ರವರ ಸೂಚನೆಯ ಮೇರೆಗೆ ಇಂದ್ರಜಿತ್ ಸಿಂಗ್ ಇವರನ್ನು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಧ್ವನಿ ಸಂಘಟನೆಯ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲೂಕಿನ ಅಧ್ಯಕ್ಷರನ್ನಾಗಿ ಧ್ವನಿ ಸಂಘಟನೆಯ ಜಿಲ್ಲಾಧ್ಯಕ್ಷ ಗಿರಿ ಯಾದವ್ ಅವರು ನೇಮಕ ಮಾಡಿ ಆದೇಶವನ್ನು ನೀಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ

ಬಳ್ಳಾರಿ ಜಿಲ್ಲಾ ಅಧ್ಯಕ್ಷರು ಗಿರಿ ಯಾದವ್, ಕಂಪ್ಲಿ ತಾಲೂಕಿನಲ್ಲಿರುವ ಎಲ್ಲಾ ವರದಿಗಾರರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಮತ್ತು ಸಂಘಟನೆಯನ್ನು ಬಲಪಡಿಸಬೇಕೆಂದು ಹೊಸದಾಗಿ ನೇಮಕಗೊಂಡ ಕಂಪ್ಲಿ ತಾಲೂಕ ಅಧ್ಯಕ್ಷ ಇಂದ್ರಜಿತ್ ಸಿಂಗ್ ಅವರಿಗೆ ಸೂಚಿಸಿದರು.

ಕಂಪ್ಲಿ ತಾಲೂಕ ಅಧ್ಯಕ್ಷರಾಗಿ ಆದೇಶವನ್ನು ಸ್ವೀಕರಿಸಿ ಮಾತನಾಡಿದ ಇಂದ್ರಜಿತ್ ಸಿಂಗ್, ನನ್ನ ಮೇಲೆ ಕರ್ನಾಟಕ ಕಾರ್ಯನಿರ್ತರ ಪತ್ರಕರ್ತರ ಧೋನಿ ಸಂಘಟನೆಯ ರಾಜ್ಯಾಧ್ಯಕ್ಷರಾದ ಬಂಗ್ಲಿ ಮಲ್ಲಿಕಾರ್ಜುನ ಮತ್ತು ಬಳ್ಳಾರಿ ಜಿಲ್ಲಾಧ್ಯಕ್ಷ ಗಿರಿ ಯಾದವ್ ಅವರುಗಳು ನನ್ನ ಮೇಲೆ ನಂಬಿಕೆ ಇಟ್ಟು ತಾಲೂಕ ಅಧ್ಯಕ್ಷ ಪದವಿಯನ್ನು ನೀಡಿದ್ದಾರೆ, ನಾನು ಅವರ ನಂಬಿಕೆಗೆ ಹುಸಿ ಯಾಗದಂತೆ ಧ್ವನಿ ಸಂಘಟನೆಯ ಕೆಲಸವನ್ನು ಮಾಡುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷರು ಕಂಪ್ಲಿ ಬೋಯರ್ ಚಂದ್ರಶೇಖರ್, ಕುರುಗೋಡು ಭೀಮಣ್ಣ, ಜಿಲ್ಲಾ ಸಹ ಕಾರ್ಯದರ್ಶಿ ಸಿರುಗುಪ್ಪ ಮಲ್ಲಿಕಾರ್ಜುನ ಸೇರಿದಂತೆ ಕಂಪ್ಲಿ ಪಟ್ಟಣದ ಇತರೆ ವರದಿಗಾರರು ಇದ್ದರು.

### ಮಹಿಳೆ ಕಾಣೆ; ಪತ್ತೆಗೆ ಮನವಿ

● ವಾರ್ತಾಲೋಕ ವಾರ್ತೆ

**ಬಳ್ಳಾರಿ :** ಇಲ್ಲಿನ ಗಾಂಧಿನಗರ ನಿವಾಸಿಯಾದ ಎಂ.ಕೆ.ಸರೋಜಾ ಎನ್ನುವ 56 ವರ್ಷದ ಮಹಿಳೆಯು ಸೆ.24 ಕಾಣೆಯಾಗಿರುವ ಕುರಿತು ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ಮಹಿಳೆಯ ಚಹರೆ ಗುರುತು: ಎತ್ತರ 5.3 ಅಡಿ, ದುಂಡುಮುಖ, ದೃಢವಾದ ಮೈಕಟ್ಟು, ಗೋಧಿ ಮೈಬಣ್ಣ ಹೊಂದಿದ್ದು ಕಾಣೆಯಾದ ಸಂದರ್ಭದಲ್ಲಿ ಚೂಡಿದಾರ ಧರಿಸಿರುತ್ತಾಳೆ. ಮಹಿಳೆಯು ಕನ್ನಡ, ತೆಲುಗು, ಹಿಂದಿ, ಇಂಗ್ಲೀಷ್ ಭಾಷೆ ಮಾತನಾಡುತ್ತಾರೆ.

ಮಹಿಳೆಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಕಂಟ್ರೋಲ್ ರೂಂ ದೂ.08392-258100, ಗಾಂಧಿನಗರ ಪೊಲೀಸ್ ಠಾಣೆಯ ದೂ.08392-272192, ಪಿ.ಎಸ್.ಐ ಮೊ.9480803082, ಪಿ.ಐ. ಮೊ9480803046 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅನಾಮಧೇಯ ಮೃತ ವಾರಸುದಾರರ ಪತ್ತೆಗೆ ಮನವಿ

● ವಾರ್ತಾಲೋಕ ವಾರ್ತೆ

**ಬಳ್ಳಾರಿ :** ಗಾಂಧಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸೆ.20 ರಂದು ನಗರದ ದುರುಗಮ್ಮ ದೇವಸ್ಥಾನದ ಮುಂದೆ ಕಾಂಪೌಂಡ್ ಹೊರಗಡೆ ಗೇಟ್ ಪಕ್ಕದ ರಸ್ತೆಯ ಪುಟ್‌ಪಾತ್ ಹತ್ತಿರ ಸುಮಾರು 50 ರಿಂದ 60 ವರ್ಷದ ಅನಾಮಧೇಯ ವ್ಯಕ್ತಿಯು ಮೃತಪಟ್ಟಿದ್ದು, ವಾರಸುದರರ ಪತ್ತೆಗೆ ಸಹಕರಿಸಬೇಕು ಎಂದು ಸಹಾಯಕ ಆರಕ್ಷಕ ಉಪ ನಿರೀಕ್ಷಕರು ಮನವಿ ಮಾಡಿದ್ದಾರೆ.

ಮೃತನ ಚಹರೆ ಗುರುತು: ಎತ್ತರ 5.4 ಅಡಿ, ಕೋಲುಮುಖ, ಸಾಧಾರಣ ಮೈಕಟ್ಟು, ಗೋಧಿ ಮೈ ಬಣ್ಣ ಹೊಂದಿದ್ದು, ಬೋಳು ತಲೆ, ಬಿಳಿ ಮತ್ತು ಕಪ್ಪು ಬಣ್ಣದ ಮೀಸೆ ಹೊಂದಿರುತ್ತಾನೆ.

ಮೃತನ ಮೈಮೇಲೆ ಬಾದಾಮಿ ಬಣ್ಣದ ಅರ್ಧತೋಳಿನ ಟೀ-ಶರ್ಟ್ ಮತ್ತು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾನೆ.

ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಕಂಟ್ರೋಲ್ ರೂಂ.08392-258100, ಗಾಂಧಿನಗರ ಪೊಲೀಸ್ ಠಾಣೆಯ ದೂ.08392-272192, ಪಿ.ಐ ಮೊ.9480803046 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



● ವಾರ್ತಾಲೋಕ ವಾರ್ತೆ

ಕುರುಗೋಡು ತಹಶೀಲ್ದಾರ್ ಕಛೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ವತಿಯಿಂದ ಗಾಂಧೀಜೀ ಹಾಗು ಲಾಲ್‌ಬಹದ್ದೂರ್‌ಶಾಸ್ತ್ರೀಯವರ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು. ಕುರುಗೋಡು ತಹಶೀಲ್ದಾರ್ ನರಸಪ್ಪತಹಶೀಲ್ದಾರ್, ಉಪ-ತಹಶೀಲ್ದಾರ್ ಎಸ್.ರಾಜಶೇಖರ್. ಕಛೇರಿಯ ಶಿರಸ್ತೆದಾರ್ ವಿಜಯಕುಮಾರ್, ಕೋಳೂರು ಉಪ-ತಹಶೀಲ್ದಾರ್ ರವೀಂದ್ರಬಾಬು, ಕುರುಗೋಡು ಆರ್‌ಐ. ಸುರೇಶ, ಆರ್‌ಐ.ಭದ್ರಯ್ಯಸ್ವಾಮಿ, ನವೀದ್, ಬಸವರಾಜ್, ಸೇರಿದಂತೆ ತಾಲೂಕುಮಟ್ಟದ ಅಧಿಕಾರಿಗಳು, ತಾಲೂಕುಕಛೇರಿಯ ಎಲ್ಲಾ ಸಿಬ್ಬಂದಿವರ್ಗದವರು ಇದ್ದರು.

## ಕೊಟ್ಟೂರು ಪಟ್ಟಣ ಪಂಚಾಯಿತಿಯಲ್ಲಿ ಭ್ರಷ್ಟಾಚಾರ ಲೋಕಾಯುಕ್ತದಲ್ಲಿ ತನಿಖೆ ನಡೆಸಿಲು ಒತ್ತಾಯ





● ವಾರ್ತಾಲೋಕ ವಾರ್ತೆ

**ಕೊಟ್ಟೂರ್ :ಅ3.**ಕೊಟ್ಟೂರು ಪಟ್ಟಣ ಪಂಚಾಯಿತಿ ಎರಡನೇ ಅವಧಿಗೆ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ವಿಳಂಬವಾಗಿದ್ದರಿಂದ ಸುಮಾರು ಒಂದೂವರೆ ವರ್ಷ ಕಾಲ ಜಿಲ್ಲಾಧಿಕಾರಿ ಮತ್ತು ಆಡಳಿತಾಧಿಕಾರಿಗಳ ಅವಧಿಯಲ್ಲಿ ಬ್ರಷ್ಟಾಚಾರ ಹೆಚ್ಚಾಗಿ ಕಂಡುಬಂದಿದ್ದು .ಹಾಗೂ ಈ ಹಿಂದೆ ಜಿಲ್ಲಾಧಿಕಾರಿ ವೆಂಕಟೇಶ್ ಇರುವಾಗ ಹೊಸದಾಗಿ 20 ಕ್ಕೂ ಹೇಚ್ಚು ಮಂದಿ ಸಿಬ್ಬಂದಿಗಳನ್ನು ನಿಯಮಬಾಹಿರವಾಗಿ ನೇಮಕ ಮಾಡಿಕೊಳ್ಳಲು ಒಬ್ಬ ವ್ಯಕ್ತಿಯಿಂದ ಲಕ್ಷ ಲಕ್ಷಗಟ್ಟಲೆ ಹಣ ಪಡೆದಿರುವ ಬಗ್ಗೆ ಸಾರ್ವಜನಿಕರಲ್ಲಿ ಚರ್ಚೆಯಾಗುತ್ತಿದೆ ? ಈ ವಿಷಯದ ಬಗ್ಗೆ ಲೋಕಾಯುಕ್ತದಲ್ಲಿ ಸೂಕ್ತವಾಗಿ ತನಿಖೆ ನಡೆಸಿ ಸಂಬಂಧಿಸಿದ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಬೇಕೆಂದು ಆಗ್ರಹಿಸಿದರು.

ಇಲ್ಲಿಯ ಪಟ್ಟಣ ಪಂಚಾಯಿತಿಯಲ್ಲಿ ಯಾರು ಬೇಕಾದರೂ ಅವರಿಗೆ ಇಷ್ಟವಾದ ಕೆಲಸ ನಿರ್ವಹಿಸಬಹುದು ನಾಳೆಯಿಂದ ಪೌರಕಾರ್ಮಿಕರು ಕಛೇರಿಯಲ್ಲಿ ಅಧಿಕಾರಿಯಾಗಿ ಕೆಲಸ ನಿರ್ವಹಿಸಲು ಯಾರಾ ಅಭ್ಯಂತರವೂ ಇಲ್ಲ ಮೇಲಧಿಕಾರಿಗಳು ಕಂಡರೂ ಕಾಣದಂತೆ ಕಣ್ಣು ಮುಚ್ಚಿ ಕುಳಿತಿದ್ದಾರೆ.ಪಟ್ಟಣ ಪಂಚಾಯಿತಿ ಅಧಿಕಾರಿಗಳು ತಿಂದು ತೇಗಿ ದುಂಡು ದುಂಡಾಗಿ ಬೆಳೆದಿರುವ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿಲು ಆಗ್ರಹಿಸಿದರು.

ಇಲ್ಲಿಯ ಪಟ್ಟಣ ಪಂಚಾಯಿತಿಯಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿಗಳ ಮತ್ತು ಪೌರಕಾರ್ಮಿಕರು ಬಗ್ಗೆ ಹಲವಾರು ಸಂಘಟನೆಗಳು ಮತ್ತು ಆರ್ ಟಿ ಐ ಕಾರ್ಯಕರ್ತರು ಮಾಹಿತಿ ಕೇಳಿದರೆ ಕೊಡದಂತೆ ರಾಜಕೀಯ ವರಿಂದ ನಿಯಂತ್ರಿಸುವುದು, ಬೆದರಿಸುವ ಕಾರ್ಯಗಳ ನಡೆದಿರುವುದು ಬೆಳಕಿಗೆ ಕಂಡು ಬಂದಿರುವುದಾಗಿ ಸಂಬಂಧಪಟ್ಟ ಮೇಲಾಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ. ಅಂಜಿನಿ , ಅಜ್ಜಪ್ಪ,ಚಂದ್ರಶೇಖರ್ ,ಪ್ರವೀಣ್ ,ಕುಮಾರ್ ಆಗ್ರಹಿಸಿದ್ದಾರೆ.

"ಅಭಿಪ್ರಾಯ" ವಾಚ್ ಮ್ಯಾನ್ ಕೆಲಸ ಮಾಡುವ ಸಿಬ್ಬಂದಿ ಕಂಪ್ಯೂಟರ್ ಕೆಲಸ ಮಾಡುತ್ತಾರೆ. ಇಲ್ಲಿರುವ ಅಧಿಕಾರಿಗಳಿಗೆ ಅಡ್ಜಸ್ಟ್ಮೆಂಟ್ ಸಿಬ್ಬಂದಿಯನ್ನು ಅವರಿಗೆ ಬೇಕಾದ ಕೆಲಸಕ್ಕೆ ನೇಮಿಸಿ ಕೊಳ್ಳುತ್ತಾರೆ. ಎಂದು

ಕೊಟ್ಟೂರಿನ ಕೊಟ್ರೇಶ್ ಜೆ ಪಿ ನಗರ ನಿವಾಸಿ ಪತ್ರಿಕೆ ಹೇಳಿದರು.

**ವರದಿ ಪರಶುರಾಮ್.**

## ಬಳ್ಳಾರಿ ನಗರದ ವಿವಿಧ ಪ್ರದೇಶಗಳ ವೃತ್ತ/ರಸ್ತೆಗಳಿಗೆ ಹೆಸರು ನಾಮಕರಣ, ಪುತ್ಥಳಿ ಸ್ಥಾಪನೆ: ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಿ

● ವಾರ್ತಾಲೋಕ ವಾರ್ತೆ

**ಬಳ್ಳಾರಿ :** ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯ ಬಳ್ಳಾರಿ ನಗರದ ವಿವಿಧ ಪ್ರದೇಶಗಳಲ್ಲಿರುವ ವೃತ, ರಸ್ತೆಗಳಿಗೆ ಹೆಸರು ನಾಮಕರಣ ಮತ್ತು ಪುತ್ಥಳಿ ಸ್ಥಾಪನೆ ಮಾಡಲು ಪಾಲಿಕೆಯ ಸಾಮಾನ್ಯ ಸಭೆಯ ತೀರ್ಮಾನಿಸಲಾಗಿದ್ದು, ಸಾರ್ವಜನಿಕರಿಂದ ಸಲಹೆ, ಆಕ್ಷೇಪಣೆಗಳಿದ್ದಲ್ಲಿ ಪಾಲಿಕೆಯ ಕಚೇರಿಗೆ ಪ್ರಕಟಣೆಗೊಂಡ ದಿನದಿಂದ 30 ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸಬಹುದು.

ನಗರದ ಗಾಂಧಿನಗರ ಬಾಲಭಾರತಿ ರಸ್ತೆಗೆ "ದಿ. ಹೇಮಾದ್ರಿಭಟ್" ರಸ್ತೆ ಎಂದು ನಾಮಕರಣ.

ಇನ್‌ಫ್ಯಾಂಟರಿ ರಸ್ತೆ ವಾಸವಿ ಶಾಲೆ ಹತ್ತಿರವಿರುವ (ಮೋರಿ ಹತ್ತಿರ) ವೃತ್ತಕ್ಕೆ "ಶ್ರೀ ಶ್ರೀ ಶ್ರೀ ಸಿದ್ದರಾಮೇಶ್ವರ ವೃತ್ತ" ಎಂದು ನಾಮಕರಣ ಮತ್ತು "ಶ್ರೀ ಶ್ರೀ ಶ್ರೀ ಸಿದ್ದರಾಮೇಶ್ವರ ಪುತ್ಥಳಿ" ಸ್ಥಾಪನೆ.

ನಗರದ ಕಾಳಮ್ಮ ಬೀದಿಯ ಪ್ರಾರಂಭದಲ್ಲಿ ಬರುವ ಪಶು ಸಂಗೋಪನಾ ಇಲಾಖೆ ಕಚೇರಿಯ ಬಲಭಾಗದಲ್ಲಿರುವ ಪಾರ್ಕ್ ವೃತ್ತಕ್ಕೆ "ವಿಶ್ವಕರ್ಮ ಅಮರಶಿಲ್ಪಿ ಶ್ರೀ ಜಕಣಾಚಾರಿ ವೃತ್ತ" ಎಂದು ನಾಮಕರಣ.

ಮೋಕಾ ರಸ್ತೆಯ ಕೆಇಬಿ ವೃತ್ತವನ್ನು "ವಿಶ್ವಗುರು ಬಸವೇಶ್ವರ ವೃತ್ತ" ಎಂದು ನಾಮಕರಣ ಮತ್ತು "ಅಶ್ವರೂಢ ಬಸವೇಶ್ವರ ಪುತ್ಥಳಿ" ಸ್ಥಾಪನೆ.

ಅಲ್ಲಂ ಭವನ ಹತ್ತಿರದ ವೃತ್ತವನ್ನು "ಗಂಗಮ್ಮ ತಾಯಿ ವೃತ್ತ" ಎಂದು ನಾಮಕರಣ ಮತ್ತು "ಗಂಗಮ್ಮ ತಾಯಿ ಪುತ್ಥಳಿ" ಸ್ಥಾಪನೆ ಮಾಡುವ ಕುರಿತು ನಗರವಾಸಿಗಳಿಂದ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು.

ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕರಿಸದೇ ಇದ್ದಲ್ಲಿ ಸರ್ಕಾರದ ಸುತ್ತೋಲೆಯ ಪ್ರಕಾರ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದು ಬಳ್ಳಾರಿ ಮಹಾನಗರ ಪಾಲಿಕೆ ಕಚೇರಿಯು ಪ್ರಕಟಣೆಯಲ್ಲಿ ತಿಳಿಸಿದೆ.

## ಜಿಂದಾಲ್ ಕಂಪನಿಗೆ ಭೂಮಿ ಪರಾಬಾರೆ, ಡಿ ವೈ ಎಫ್ ಐ ನಿಂದ ನಾಳೆ ಪಾದಯಾತ್ರೆ

● ವಾರ್ತಾಲೋಕ ವಾರ್ತೆ

**ಬಳ್ಳಾರಿ.ಆ.3.** ರಾಜ್ಯ ಸರ್ಕಾರ ಜೆ ಎಸ್ ಡಬ್ಲ್ಯು ಉಕ್ಕಿನ ಕಾರ್ಖಾನೆಗೆ ಅತಿ ಅಗ್ಗದ ದರದಲ್ಲಿ ಅಂದರೆ ಕೇವಲ 1.25 ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡುತ್ತಿರುವುದನ್ನು ಖಂಡಿಸಿ ನಾಳೆ ಅಕ್ಟೋಬರ್ 5 ರಂದು ಬಳ್ಳಾರಿಯಿಂದ ಕುಡಿತಿನಿ ಮಾರ್ಗವಾಗಿ ತೋರಣಗಲ್ ಜಿಂದಾಲ್ ಕಾರ್ಖಾನೆ ವರೆಗೆ ಡಿ ವೈ ಎಫ್ ಐ ಸಂಘಟನೆಯಿಂದ ಪಾದಯಾತ್ರೆಯನ್ನು ನಡೆಸಲಾಗುವುದು ಎಂದು ಇರ್ರಿ ಸ್ವಾಮಿ ಕೊಳಗಲ್ ಇವರು ತಿಳಿಸಿದ್ದಾರೆ.

ಅವರಿಂದು ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿ ಮಾತನಾಡಿ,

ನಾಳೆ ಬೆಳಿಗ್ಗೆ 9.00 ಗಂಟೆಗೆ ಪಾದಯಾತ್ರೆ ಬಳ್ಳಾರಿ ನಗರದ ಕೇಂದ್ರ ಪ್ರದೇಶವಾದ ರಾಯಲ್ ಸರ್ಕಲ್ ನಿಂದ ಪ್ರಾರಂಭಗೊಂಡು, ಕುಡುತಿನಿ ಪಟ್ಟಣಕ್ಕೆ ತಲುಪುವುದು, ಅಂದು ಆ ದಿನ ಕುಡಿತಿನಿಯಲ್ಲಿ ತಂಗಲಾಗುವುದು, ಮರುದಿನ 6 ಬೆಳಿಗ್ಗೆ ಕುಡುತಿನಿ ನಿಂದ ತೋರಣಗಲ್ಲು ಒಲ್ಡ್ ಗೇಟ್ ವರಗೆ ತಲುಪಿ ಅಲ್ಲಿ ಅಂದು ಪ್ರತಿಭಟನೆ ಧರಣಿಯನ್ನು ನಡೆಸಲಾಗುವುದು ಎಂದರು.

ಸ್ಥಳೀಯ ನಿರುದ್ಯೋಗ ಯುವಜನರಿಗೆ ಉದ್ಯೋಗ ನೀಡಿಕೆಯಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಗೆ ಪ್ರಥಮ ಆದ್ಯತೆಯಾಗಿ ನೀಡಬೇಕು ಮತ್ತು ಜಿಂದಾಲ್ ಮಾಲೀಕರಿಗೆ 5,667 ಎಕರೆ ಜಮೀನು ಮಾರಾಟಕ್ಕೆ



ಅನುಮೋದನೆ ನೀಡಿದ ಕಾಂಗ್ರೆಸ್ ಸರ್ಕಾರ, ಜಮೀನಿನ ಮೂಲ ರೈತರಿಗೆ ಮಾರುಕಟ್ಟೆಯ ಮೌಲ್ಯ ದೊರೆಯುವಂತೆ ಕ್ರಮ ಕೈಗೊಳ್ಳಬೇಕು,

ಕಾರ್ಖಾನೆಯ ಸುತ್ತಮುತ್ತಲ ಹಳ್ಳಿಗಳಿಗೆ ಸಿ ಎಸ್ ಆರ್ ನಿಧಿ ಅಡಿಯಲ್ಲಿ ಸ್ಥಳೀಯ ಬಡ ಜನರಿಗೆ ವಸತಿ, ನಿವೇಶನ ರಹಿತರಾದ ಅರ್ಹ ಫಲಾನುಭವಿ ಕುಟುಂಬಗಳಿಗೆ ವಸತಿ ನಿವೇಶನ ನೀಡಬೇಕು ಎಂದು ಇದೇ ಸಂದರ್ಭದಲ್ಲಿ ಜಿಂದಾಲ್ ಕಾರ್ಖಾನೆಯ ಅಧಿಕಾರಿಗಳನ್ನು ಒತ್ತಾಯಿಸಿದರು.

ಅದೇ ರೀತಿ ಕುಡುತಿನಿ ಪಟ್ಟಣ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳ ರೈತರಿಂದ ಪಡೆದ 13000 ಎಕರೆ ಭೂಮಿಯನ್ನು ಪಡೆದ ಮಿತ್ತಲ್, ಬ್ರಾಹ್ಮಣಿ,ಎನ್.ಎಮ್.ಡಿ.ಸಿ ಕಂಪನಿಗಳು ಸರಿ ಸುಮಾರು 14 ವರ್ಷ ಕಳೆದರೂ ಕೈಗಾರಿಕೆಗಳು ಸ್ಥಾಪನೆ ಮಾಡಿರುವುದಿಲ್ಲ ಇಂತಹ ಭೂಮಿಯನ್ನು ವಾಪಸ್ ಪಡೆದುಕೊಂಡು ಮತ್ತೆ ರೈತರಿಗೆ ನೀಡಬೇಕು, ಭೂಮಿಯನ್ನು ಕಳೆದುಕೊಂಡು ಉದ್ಯೋಗಗಳು ಇಲ್ಲದೆ ಭೂ ಸಂತ್ರಸ್ಥ ಕುಟುಂಬಗಳು ಬಿದಿಪಾಲಾಗಿದ್ದು ಅವರಿಗೆ ಸೂಕ್ತ ಪರಿಹಾರ ಒದಗಿಸಬೇಕು,

ಜಿಲ್ಲೆಯ ಎಲ್ಲಾ ಸ್ಥಳೀಯ ಸಂಪನ್ಮೂಲಗಳನ್ನು ಪಡೆದುಕೊಂಡು ಸ್ಥಾಪನೆಯಾದ ಜಿಂದಾಲ್ ಕಾರ್ಖಾನೆಯ ಕೆಲಸಗಳು ಪರ ರಾಜ್ಯದವರ ಪಾಲಾಗುತ್ತಿದೆ ಇಲ್ಲಿನ ಸ್ಥಳೀಯರು ಮಾತ್ರ ಕೇವಲ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಬೇಕು ಜೊತೆಗೆ ಬಳ್ಳಾರಿ ಸುತ್ತಮುತ್ತಲಿನ ಗ್ರಾಮದ ಯುವ ಜನತೆ ಇಲ್ಲಿನ ಗುತ್ತಿಗೆ ಆಧಾರದಲ್ಲಿನ ಕೆಲಸದಿಂದ ರೋಸಿ ಹೋಗಿ ದೂರದ ಬೆಂಗಳೂರಿಗೆ ವಲಸೆ ಹೋಗುವ ಪರಿಸ್ಥಿತಿ ಉಂಟಾಗಿದೆ ಈ ಎಲ್ಲಾ ಸಮಸ್ಯೆಗಳನ್ನು ವಿರೋಧಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಬಳ್ಳಾರಿ ಜಿಲ್ಲಾ ಸಮಿತಿ ಬಳ್ಳಾರಿ ಇಂದ ಜಿಂದಾಲ್ ಕಾರ್ಖಾನೆ ಓಲ್ಡ್ ಗೇಟ್ ವರೆಗೆ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿ ವೈ ಎಫ್ ಐ ಸಂಘಟನೆಯ ಎಲ್ಲಾ ಜಿಲ್ಲಾ ಮತ್ತು ತಾಲೂಕು ಪದಾಧಿಕಾರಿಗಳು, ಆರ್ ಬಿ ಐ ನ ಮುಖಂಡರು ಸೇರಿದಂತೆ ಇತರರಿದ್ದರು.

# 2024 – 25 ನೇ ಸಾಲಿನ ಅತ್ಯುತ್ತಮ ಮುಖ್ಯಗುರು ಪ್ರಶಸ್ತಿ
## ಜಿಲ್ಲಾ ಅತ್ಯುತ್ತಮ ಮುಖ್ಯ ಗುರುಗಳ ಪ್ರಶಸ್ತಿ ಟಿ. ಮಹೇಶ್ವರ ಮುಡಿಗೆ

● ವಾರ್ತಾಲೋಕ ವಾರ್ತೆ

**ಹೊಸಪೇಟೆ :ಅ.03** ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರು, ವಿಜಯನಗರ ಜಿಲ್ಲಾ ಮತ್ತು ತಾಲೂಕು ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ರವರ 136ನೇ ವರ್ಷದ ಜನ್ಮ ದಿನಾಚರಣೆ ಅಂಗವಾಗಿ 2024 – 25 ನೇ ಸಾಲಿನ ಜಿಲ್ಲಾ ಅತ್ಯುತ್ತಮ ಮುಖ್ಯ ಗುರುಗಳ ಪ್ರಶಸ್ತಿಯನ್ನು ಸೆ. 22ರಂದು ನೀಡಿ ಗೌರವಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಒಳಾಂಗಣ ಕ್ರೀಡಾಂಗಣದ ಸಭಾ ಭವನದಲ್ಲಿ ಅತ್ಯುತ್ತಮ ಮುಖ್ಯಗುರುಗಳ ಪ್ರಶಸ್ತಿಯನ್ನು ಕೊಡಮಾಡಲಾಯಿತು. ಈ ಪ್ರಶಸ್ತಿಯನ್ನು ಪ್ರಸ್ತುತವಾಗಿ ಮರಿಯಮ್ಮನಹಳ್ಳಿಯಲ್ಲಿರುವ ಶ್ರೀ ಚಿಕ್ಕೇನಕೊಪ್ಪದ ಚನ್ನವೀರ ಶರಣರ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹಾಗೂ ಮುಖ್ಯ ಗುರುಗಳಾಗಿ ಕಾರ್ಯನಿರ್ವಹಿಸುತ್ತಿರುವ ಟಿ.ಮಹೇಶ್ವರ ಇವರಿಗೆ ನೀಡಿ ಗೌರವಿಸಲಾಯಿತು.

ಕಿರು ಪರಿಚಯ : ಹಗರಿಬೊಮ್ಮನಹಳ್ಳಿ ತಾಲೂಕಿನ



ಮಾದೂರು ಗ್ರಾಮ ಎನ್ನುವ ಕುಗ್ರಾಮದಲ್ಲಿ 1– 6–1965 ರಲ್ಲಿ ಜನಿಸಿ ಬಿ.ಎ, ಬಿ. ಎಡ್ ವಿದ್ಯಾಬ್ಯಾಸ ಮುಗಿಸಿ 1– 6–1992ರಿಂದ ಮುಖ್ಯ ಗುರುಗಳಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ 2023 ರಿಂದ ಶ್ರೀ ಶರಣರ ಮತ್ತು ಶ್ರೀ ಉಜ್ಜಿನಿ ಮಾದರಿ ಹಿರಿಯ ಶಾಲೆಯಲ್ಲಿ ಉತ್ತಮ ಆಡಳಿತಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಅದಮ್ಯ ಸೇವೆಯನ್ನು ಗುರುತಿಸಿ 22.09.2024ರಂದು ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ.

ಇವರ ಕೈಯಲ್ಲಿ ಕಳಿತ ವಿದ್ಯಾರ್ಥಿಗಳು ಇಂಜಿನಿಯರ್ ಹಾಗೂ ದೊಡ್ಡ ದೊಡ್ಡ ರಾಜಕೀಯ ದೂರೀಣರಾಗಿ ಹೊರಹೋಮ್ಮಿದ್ದಾರೆ. ಇವರು ಸರಳ ಸ್ನೇಹ ಸಂಘ ಜೀವಿಯಗಿದ್ದಾರೆ. ಇವರಿಗೆ ಎಲ್ಲರೂ ಅಚ್ಚುಮೆಚ್ಚು.

ಈ ಸಂಧರ್ಭದಲ್ಲಿ ಎಂ ಚನ್ನಬಸಪ್ಪ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊಸಪೇಟೆ, ಕೆ. ಹನುಮಂತಪ್ಪ ಗೌರವಾಧ್ಯಕ್ಷರು ಬೆಂಗಳೂರು, ಎನ್. ರಾಜ ಗೋಪಾಲ್ ರಾಜ್ಯದ್ಯಕ್ಷರು ಬೆಂಗಳೂರು, ಎಂ. ಕೆ ರಾಜು, ಟಿ. ರವಿಕುಮಾರ, ಟಿ.ಹನುಮಂತಪ್ಪ, ಕೆ.ಕಲ್ಲೇಶ ಜಿಲ್ಲಾಧ್ಯಕ್ಷರು, ಅತಿಥಿಗಳಾಗಿ ಗೊಗ್ಗ ಚೆನ್ನಬಸವರಾಜ, ಕಟ್ಟಾ ನಾಗರಾಜ, ಗುಂಡು ಮುಣಗು ತಿಪ್ಪೇಸ್ವಾಮಿ, ರತ್ನಾದತ್ತ ಟಿ.ಎಸ್, ಕಮಲಾಕ್ಷ ಶಾನಭಾಗ, ಮುಶೀರ್ ಅಹಮದ್, ಟಿ.ಎಸ್. ನಾಗರಾಜ ಇತರರಿದ್ದರು.

**ವರದಿ ಎಲ್. ಮಂಜುನಾಥ**

# ವೀರಶೈವ ಜಂಗಮ ಜಾತಿ ಪ್ರಮಾಣ ಪತ್ರ ನೀಡಲು ಒತ್ತಾಯಿಸಿ ಮನವಿ ಸಲ್ಲಿಕೆ

● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ3.** ವೀರಶೈವ ಜಂಗಮರಿಗೆ ವೀರಶೈವ ಲಿಂಗಾಯತ ಎಂದು ನೀಡುತ್ತಿರುವ ಜಾತಿ ಪ್ರಮಾಣ ಪತ್ರವನ್ನು ನಿಲ್ಲಿಸಿ, ವೀರಶೈವ ಜಂಗಮ ಎಂದು ನೀಡಬೇಕು ಎಂದು ಒತ್ತಾಯಿಸಿ ತಾಲ್ಲೂಕು ಜಂಗಮ ಸಮಾಜ ಸಂಸ್ಥೆಯ ಕಾರ್ಯಕರ್ತರು ಗುರುವಾರ ತಹಶೀಲ್ದಾರರ ಮುಖಾಂತರ ಕಂದಾಯ ಇಲಾಖೆಯ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಂಗಮ ಸಮಾಜ ಸಂಸ್ಥೆಯ ಅಧ್ಯಕ್ಷ ಕೆ.ಎಚ್.ಎಂ. ಗಂಗಾಧರಸ್ವಾಮಿ ಮಾತನಾಡಿ, ನಮ್ಮ ಎಲ್ಲಾ ದಾಖಲೆಗಳು ವೀರಶೈವ ಜಂಗಮ ಎಂದಿವೆ. ನಾವು ನೈಜವಾಗಿ ವೀರಶೈವ ಜಂಗಮರಾಗಿದ್ದು, ನಾವು ವೀರ ಶೈವ ಲಿಂಗಾಯತರ ಹಾಗೂ ನಮ್ಮ ಅಚಾರ ವಿಚಾರಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಜಾತಿ ಪ್ರಮಾಣ ಪತ್ರಕ್ಕೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದಾಗ



ನಿಮಗೆ ವೀರಶೈವ ಜಂಗಮ ಎಂದು ಜಾತಿ ಪ್ರಮಾಣ ಪತ್ರ ನೀಡುವ ಬರುವುದಿಲ್ಲ ಎಂದು ಹೇಳಿ, ವೀರಶೈವ ಲಿಂಗಾಯತ ಎಂದು ಪ್ರಮಾಣ ಪತ್ರ ನೀಡಿ ನಮಗೆ ಅನ್ಯಾಯ ಮಾಡಲಾಗುತ್ತಿದೆ. ಇದರಿಂದ ಅತ್ಯಂತ ಹಿಂದುಳಿದ ಜಂಗಮರ ಮುಂದಿನ ತಲೆಮಾರಿಗೆ ಸಕಾಷ್ಟು ನಷ್ಟವಾಗುತ್ತದೆ. ಅದ್ದರಿಂದ ಇನ್ನು ಮುಂದೆ ನಮಗೆ ಜಾತಿ ಪ್ರಮಾಣ ಪತ್ರ ನೀಡುವಾಗ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ 3ಬಿ ಅಡಿಯಲ್ಲಿಯೇ ನಮಗೆ ವೀರಶೈವ ಜಂಗಮ ಎಂದು ಜಾತಿ ಪ್ರಮಾಣ ಪತ್ರ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಜಂಗಮ ಸಮಾಹದ ಮುಖಂಡ ಎ.ಎಂ. ವಾಗೀಶಮೂರ್ತಿ ಮಾತನಾಡಿ, ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಜಂಗಮರಿದ್ದಾರೆ. ಆದರೆ ನಮಗೆ ವೀರಶೈವ ಲಿಂಗಾಯತ ಜಾತಿ ಪ್ರಮಾಣ ಪತ್ರ ನೀಡಲಾಗುತ್ತಿದೆ. ತಕ್ಷಣ ಇದನ್ನು ನಿಲ್ಲಿಸಿ, ಇನ್ನು ಮುಂದೆ ವೀರಶೈವ ಜಂಗಮ ಎಂದು ಜಾತಿ ಪ್ರಮಾಣ ಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ತಹಶೀಲ್ದಾರ್ ಎಂ. ರೇಣುಕಾ ಮನವಿ ಪತ್ರ ಸ್ವೀಕರಿಸಿದರು. ಜಂಗಮ? ಸಮಾಜದ ತಾಲ್ಲೂಕು ಕಾರ್ಯದರ್ಶಿ ಕೆ.ಎಚ್.ಎಂ. ಸಚಿನ್ ಕುಮಾರ್, ಉಪಾಧ್ಯಕ್ಷ ಎ.ಎಂ. ವೀರಭದ್ರಸ್ವಾಮಿ, ಸಹ ಕಾರ್ಯದರ್ಶಿ ಚಂದ್ರಶೇಖರ್ ಸ್ವಾಮಿ, ಸಂಘಟನಾ ಕಾರ್ಯದರ್ಶಿ ಸಂತೋಷ, ಸಿದ್ದೇಶ, ಖಜಾಂಚಿ ವಿವೇಕ್, ಸಹ ಖಜಾಂಚಿ ಮನೋಜ್ ಕುಮಾರ್, ಸಂಚಾಲಕಾರದ ಉಮಶಂಕರ್, ನಟರಾಜ್, ಕೇದಾರ್ ಸ್ವಾಮಿ, ವಕೀಲ ಸಂಘದ ತಾಲ್ಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಕೆ.ಎಚ್. ಎಂ. ವಿಶ್ವನಾಥ, ವೀರೇಶ್, ನಟರಾಜ, ಎಳನೀರು ಮಂಜಣ್ಣ, ಚನ್ನಬಸಯ್ಯ, ಚಿದಾನಂದ, ಯೋಗೀಶ್ ಪಾಲ್ಗೊಂಡಿದ್ದರು.

ವರದಿ ಹೆಚ್ಚು ವೀರಣ್ಣ.

# ಗ್ರಾಮ ಲೆಕ್ಕಾಧಿಕಾರಿ ನೇಮಕಾತಿ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ಕಠಿಣ ಕ್ರಮಕ್ಕಾಗಿ ಎಸ್.ಎಫ್.ಐ ಒತ್ತಾಯ

● ವಾರ್ತಾಲೋಕ ವಾರ್ತೆ

**ಹೊಸಪೇಟೆ :ಅ3.** ಭಾರತ ವಿದ್ಯಾರ್ಥಿ ಫಡರೇಷನ್(ಎಸ್.ಎಫ್.ಐ) ವಿಜಯನಗರ ಜಿಲ್ಲಾ ಸಮಿತಿ ಮನಗಾಣಿಸುವುದೇನೆಂದರೆ ಇತ್ತೀಚಿನ ದಿನಗಳಲ್ಲಿ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗುವ ಬೆಳವಣಿಗೆ ಹೆಚ್ಚು ಸಂಭವಿಸುತ್ತಿದೆ. ಇದರಿಂದ ಲಕ್ಷಾಂತರ ಅಭ್ಯರ್ಥಿಗಳಿಗೆ ಅಘಾತ ಉಂಟು ಮಾಡಿದೆ. ಇದರ ನಡುವೆ 29.09.2024 ರ ಭಾನುವಾರದಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಗ್ರಾಮ ಲೆಕ್ಕಾಧಿಕಾರಿ ಹುದ್ದೆ ನೇಮಕಾತಿಯ ಕಡ್ಡಾಯ ಕನ್ನಡ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ ಎಂದು ಪರೀಕ್ಷಾರ್ಥಿಗಳಿಂದ ದೂರು ನೀಡಲಾಗಿದೆ.

ಪರೀಕ್ಷಾ ಕೇಂದ್ರದಲ್ಲಿ ಕಡ್ಡಾಯ ಕನ್ನಡ ಪತ್ರಿಕೆ ಸೀಲ್ ಓಪನ್ ಮಾಡಿದ ಪ್ರಶ್ನೆ ಪತ್ರಿಕೆ ಹಂಚಿಕೆ ಮಾಡಲಾಗಿದೆ ಎಂದು ಕೆಲವು ಪರೀಕ್ಷಾರ್ಥಿಗಳು ಪರೀಕ್ಷಾ ಪ್ರಾಧಿಕಾರಕ್ಕೆ ದೂರು ನೀಡಿದ್ದಾರೆ. ಬೀದರ್ ಜಿಲ್ಲಾ ಕೇಂದ್ರದಲ್ಲಿನ ದತ್ತಗಿರಿ ಕಾಲೇಜಿನ ಗ್ರಾಮ ಲೆಕ್ಕಾಧಿಕಾರಿ ಹುದ್ದೆ ನೇಮಕಾತಿಯ ಕಡ್ಡಾಯ ಕನ್ನಡ ಪರೀಕ್ಷೆ ನಡೆಸಲಾಗುತ್ತಿದ್ದ ಪರೀಕ್ಷ ಕೇಂದ್ರದಲ್ಲಿ ಈ ಎಡವಟ್ಟು ಸಂಭವಿಸಿದೆ. ಸರ್ಕಾರಿ ಹುದ್ದೆಗಳ ನೇಮಕಾತಿ ಸೇರಿದಂತೆ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ಪ್ರಶ್ನೆ ಪತ್ರಿಕೆಗಳ ಬಂಡಲ್‌ನ್ನು ಸೀಲ್ ಮಾಡಲಾಗಿರುತ್ತದೆ. ಪರೀಕ್ಷಾ ಅಭ್ಯರ್ಥಿಗಳ ಕೋಣೆಯಲ್ಲಿ ಸೀಲ್ಡ್ ಪ್ಯಾಕ್‌ನ್ನು ಪ್ರದರ್ಶನ ಮಾಡಿದ ನಂತರ, ಬಂಡಲ್‌ಗೆ ಕೆಲ ಅಭ್ಯರ್ಥಿಗಳಿಂದ ಸಹಿ ಹಾಕಿಸಿಕೊಂಡು ಎಲ್ಲರೆದುರಿಗೆ ಓಪನ್ ಮಾಡಲಾಗುತ್ತದೆ. ಆದರೆ, ಬೀದರ್ ಜಿಲ್ಲೆ ದತ್ತಗಿರಿ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆ ಪತ್ರಿಕೆ ಬಂಡಲ್ ಮೊಲದೇ ತೆರೆಯಲಾಗಿದೆ. ಜೊತೆಗೆ, ಪ್ರಶ್ನೆ ಪತ್ರಿಕೆಯ ಸೀಲ್ ಕೂಡ ಓಪನ್ ಆಗಿತ್ತು ಎಂದು ದೂರಿದ್ದಾರೆ. ಯಾರೋ ಇದನ್ನು ಸೋರಿಕೆ ಮಾಡಿದ್ದಾರೆ ಎಂದು ಕಲಬುರಗಿ ಜಿಲ್ಲೆಯ ಚಿಂಚೋಳಿ ಮೂಲದ ಸಂತೋಷ್ ಎಂಬ ಪರೀಕ್ಷಾರ್ಥಿ ದೂರಿನಲ್ಲಿ ಆರೋಪ ಮಾಡಿದ್ದಾನೆ. ಈ ಕೃತ್ಯವನ್ನು ಮತ್ತು ಇಲಾಖೆಯ ವೈಫಲ್ಯವನ್ನು ಭಾರತ ವಿದ್ಯಾರ್ಥಿ



ಫೆಡರೇಷನ್(ಎಸ್.ಎಫ್.ಐ) ವಿಜಯನಗರ ಜಿಲ್ಲಾ ಸಮಿತಿ ಅವಧಿ ವಿಸ್ತರಣೆ ಹಾಗೂ ಮರು ಪರೀಕ್ಷೆ ನಡೆಸಬೇಕು, ಎಂದು ತೀವ್ರವಾಗಿ ಖಂಡಿಸುತ್ತದೆ,

ರಾಜ್ಯದಲ್ಲಿ 47 ಕ್ಕೂ ಹೆಚ್ಚು ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿವೆ ಎಂದು ವರದಿಯಾಗಿರುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಕಿಡಿಗೇಡಿಗಳು ಮಾಡುವ ಕೆಲಸದಿಂದ ರಾಜ್ಯದ ಬೊಕ್ಕಸಕ್ಕೆ ಮತ್ತು ಪರೀಕ್ಷಾ ಅಭ್ಯರ್ಥಿಗಳಿಗೆ ಲಕ್ಷಾಂತರ ರೂಪಾಯಿ ಹಣ ಮತ್ತು ಅವರ ಸಮಯವು ನಷ್ಟವಾಗುತ್ತಿದೆ. ಇನ್ನೊಂದೆಡೆ ಕೋಚಿಂಗ್ ಸೆಂಟರ್‌ಗಳು ತರಬೇತಿ ನೀಡುವ ಹೆಸರಿನಲ್ಲಿ ಲಕ್ಷಗಟ್ಟಲೆ ಹಣ ಲೂಟಿ ಮಾಡುವ ದಂಧೆಯಲ್ಲಿ ತೊಡಗಿಕೊಂಡಿವೆ. ಈ ಎಲ್ಲಾ ಬೆಳವಣಿಗೆಯನ್ನು ಜನಶಕ್ತಿ ಪತ್ರಿಕೆ ಮತ್ತು ಭಾರತ ವೈಭವ ಪತ್ರಿಕೆ ಮತ್ತು ಟಿ.ವಿ 5 ಮಾಧ್ಯಮಗಳ ಮೂಲಕ ಸುದ್ದಿಯಾಗಿದ್ದರು ಸರ್ಕಾರ ಮೌನವಹಿಸಿದೆ. ದಂಧೆಕೋರರ ಲಾಭಕ್ಕೆ ರಾಜ್ಯದ ಯುವಕರ ಭವಿಷ್ಯವನ್ನು ಹಾಳುಮಾಡುತ್ತಿದೆ. ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾದವರು ಯಾರೇ ಆಗಿರಲಿ ಅವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಇನ್ನು ಮುಂದೆ ಈ ಘಟನೆಗಳು ನಡೆಯದಂತೆ ಎಚ್ಚರಿಕೆಯನ್ನು ಸರ್ಕಾರ ವಹಿಸಬೇಕು. ಪ್ರಶ್ನೆಪತ್ರಿಕೆ ಸೋರಿಕೆಗೆ ಕಾರಣರಾದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಜರುಗಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ಜಿಲ್ಲಾ ಸಮಿತಿಯು ತಮ್ಮಲ್ಲಿ ಪತ್ರಿಕೆ ಪ್ರಕಟಣೆ ಮೂಲಕ ಒತ್ತಾಯಿಸಿದರತ್ತದೆ.

ಈ ಸಂದರ್ಭದಲ್ಲಿ

ಭಾರತ ವಿದ್ಯಾರ್ಥಿ ಫೆಡರೇಶನ್ (ಖಈಖ)

ವಿಜಯನಗರ ಜಿಲ್ಲೆ ಸಮಿತಿ.

ಜಯಸೂರ್ಯ,ಜಿಲ್ಲೆ ಅಧ್ಯಕ್ಷರು ಶಿವಾರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಕೆ.ಎ ಪವನ್ ಕುಮಾರ್, ಜಿಲ್ಲಾ ಸಹ ಕಾರ್ಯದರ್ಶಿ ಸಹಾನ. ಡಿ. ಎಂ ಜಿಲ್ಲೆ ಪದಾಧಿಕಾರಿ ಜಿಲ್ಲೆ ಸಮಿತಿ, ಮುಖಂಡರು ಮಲ್ಲಿಕಾರ್ಜುನ, ಲೊಕೇಶ, ಲಕ್ಷ್ಮಿ , ಅನಿಲ್, ಪುಷ್ಪ.

ವರದಿ ಅಂಬರೀಶ್ ನಾಯಕ್.

# ಸಮಾಜ ಸೇವೆ ಮಕ್ಕಳ ಅಭಿವೃದ್ದಿಗೆ ಸ್ವಚ್ಚತಾ ಅಭಿಯಾನ ಸಹಕಾರಿಯಾಗಲಿದೆ: ಸುರೇಶ್ ಪ್ರಸಾದ್

● ವಾರ್ತಾಲೋಕ ವಾರ್ತೆ

**ಸಂಡೂರು: ಆ : 3** ಸಮಾಜ ಸೇವೆ, ಮಕ್ಕಳ ಅಭಿವೃದ್ದಿ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇದರ ಜೊತೆಗೆ ಸ್ವಚ್ಚತಾ ಅಭಿಯಾನ ಸಹಕಾರಿಯಾಗಲಿದೆ ಎಂದು ಐ.ಬಿ.ಎಂ. ಬೆಂಗಳೂರಿನ ಅಧಿಕಾರಿ ಸುರೇಶ್ ಪ್ರಸಾದ್ ತಿಳಿಸಿದರು.

ಅವರು ಬಿಕೆಜಿ ಹದ್ದಿನಪಡೆ ಐರನ್ ಓರ್ ಮೈನ್ಸ್, ಬಿಕೆಜಿ ಮೈನಿಂಗ್ ಪೈ.ಲಿ. ಮತ್ತು ಇಂಡಿಯನ್ ಬ್ಯೂರೋ ಅಫ್ ಮೈನ್ಸ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸ್ವಚ್ಚತೆಯೇ ಸೇವೆ ಮುಕ್ತಾಯ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಕಲಿಯಲು ಆಸಕ್ತಿ ಇರುವ ವಿದ್ಯಾರ್ಥಿಗಳು ಉಜ್ವಲ ಭವಿಷ್ಯ ಕಾಪಾಡಿಕೊಳ್ಳಲು ಸಾಧ್ಯ, ಎಲ್ಲಿಯವರೆಗೆ ಸಮಾಜ, ಪೋಷಕರು ಅಭಿವೃದ್ಧಿಯ ಪಥದಲ್ಲಿ ಸಾಗದಿದ್ದರೆ ಭವಿಷ್ಯವನ್ನು ಕಾಪಾಡಿಕೊಳ್ಳಲು ಕಷ್ಟವಾಗಬಹುದು, ಅದ್ದರಿಂದ ಪ್ರಗತಿಯ ಪಥದಲ್ಲಿ ಸಾಗುವ ಮೂಲಕ ಸ್ವಚ್ಚತೆಯನ್ನು ಕಾಪಾಡುವಂತಹ ಕಾರ್ಯ ಶಾಲೆ, ಮನೆ, ದೇಶ, ಗ್ರಾಮ ಪಟ್ಟಣಗಳಲ್ಲಿ ನಡೆದಾಗ ಅಭಿವೃದ್ದಿ ಸಾಧ್ಯ ಎಂದರು.



ಕಾರ್ಯಕ್ರಮದಲ್ಲಿ ಜಿ.ಎಂ. ಪಿ.ಶ್ರೀನಿವಾಸರಾವ್ ಮಾತನಾಡಿ ಮುಂದಿನ ವರ್ಷ ನೂತನ ಕಟ್ಟಡವನ್ನು ಸುಧಾಕರ್ ಅವರಿಂದ ಉದ್ಘಾಟಿಸುತ್ತೇವೆ, ಮನುಷ್ಯ ಜೀವನದಲ್ಲಿ ಯಾರು ಶಾಶ್ವತವಲ್ಲ, ಕಾರ್ಯಕ್ರಮದ ಜೊತೆಯಲ್ಲಿ ಬೇರೆ ಬೇರೆ ಕಾರ್ಯಕ್ರಮ ಹಮ್ಮಿಕೊಂಡು ಶೈಕ್ಷಣಿಕ ಕಾರ್ಯದಿಂದ ಮಾನಸಿಕ ನೆಮ್ಮದಿ ಸಾಧ್ಯ ಎಂದರು.

ಡಿ.ಜಿ.ಎಂ.ಪ್ರಮೋದ ಅವರು ಮಾತನಾಡಿ ಭಾರತ ಸರ್ಕಾರದಿಂದ ಸ್ವಚ್ಚತಾ ಹೀ ಸೇವಾ 15 ದಿನಗಳ ಕಾಲದ ಈ ಕಾರ್ಯಕ್ರಮವನ್ನು ಬೇರೆ ಬೇರೆ ಕಡೆ ಶಾಲೆಗಳಲ್ಲಿ ಹಮ್ಮಿಕೊಂಡಿದ್ದೇವೆ, ಶಿಥಿಲಗೊಂಡ ಕಟ್ಟಡವನ್ನು ಪುನರುತ್ಥಾನ ಗೊಳಿಸಲಾಗಿದೆ. ಮಕ್ಕಳಿಗೆ ಒಳ್ಳೆಯ ಸೌಲಭ್ಯ, ಶಿಕ್ಷಣ ಮುಖ್ಯ ಸರ್ಕಾರ ಸಾರ್ವಜನಿಕರ ಪ್ರೋತ್ಸಾಹ ಬಹು ಮುಖ್ಯ ಎಂದರು.

ಎಸ್.ಡಿ.ಎಂ.ಸಿ.ಅಧ್ಯಕ್ಷ ಉಮೇಶ್ ಮಾತನಾಡಿ ಬಿಕೆಜಿ ಕಂಪನಿ ಪ್ರಾರಂಭವಾದ ನಂತರ ನಮ್ಮ ಶಾಲೆಗೆ ಕೊಟ್ಟ ಕೊಡುಗೆ ಅಪಾರ , ದೇವಸ್ಥಾನದಿಂದ, ಶಿಕ್ಷಣ, ಆರೋಗ್ಯದ ಬಗ್ಗೆ ಕಾಳಜಿ ವಹಿಸಿದವರು ಬಿಕೆಜಿ ಕಂಪನಿಯವರು ಪುರಸಭೆಯ ಉಪಾಧ್ಯಕ್ಷೆ ಲತಾ ಎಂ.ಸಿ. ಮಾತನಾಡಿ ಶಾಲೆಯ ಮಕ್ಕಳಿಗೆ ಉತ್ತಮ ಸೌಕರ್ಯವಿದ್ದು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಕಲಿಯಬೇಕು ಎಂದು ವಿದ್ಯಾರ್ಥಿಗಳಿಗೆ ಕವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯಗುರುಗಳಾದ ಸತಿಶ್, ಬಿಕೆಜಿ ಕಂಪನಿಯ ಹೆಚ್.ಅರ್. ರಾಜಶೇಖರ ಬೆಲ್ಲದ್, ಗೋಪಾಲ್ ಗೀರೀಶ್, ರಮೇಶ್, ಸತ್ಯನಾರಾಯಣ ಶಿರ್ಕೆ, ಸುರೇಶ್ ಪ್ರಸಾದ. ಎಸ್.ಎಂ.ಜಿ. ಐ.ಬಿ.ಎಂ. ನ ಸುಧಾಕರ ಕೆ. ಅಜೇಯ ಕುಮಾರ್, ಇತರ ಗಣ್ಯರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಂಗನವಾಡಿಗಳಿಗೆ ಸ್ಮಾರ್ಟ್ ಟಿವಿ ವಿತರಣೆ
## ಹೊಸ್ಪೂರಿನಲ್ಲಿ ಅಂಗನವಾಡಿಯತ್ತ ಸಮುದಾಯ ಪಾಲಕ–ಪೋಷಕರ ಸಭೆ

● ವಾರ್ತಾಲೋಕ ವಾರ್ತೆ

**ಹೊಸಪೇಟೆ ಅಕ್ಟೋಬರ್ 03.** : ಹೊಸಪೇಟೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಚಿತವಾಡಗಿ 1ನೇ ವಲಯದ ಹೊಸ್ಪೂರು 1 ಮತ್ತು 2ನೇ ಅಂಗನವಾಡಿ ಕೇಂದ್ರದಲ್ಲಿ ಅಂಗನವಾಡಿಯತ್ತ ಸಮುದಾಯ ಪಾಲಕ ಪೋಷಕರ ಸಭೆ ಅಕ್ಟೋಬರ್ 03ರಂದು ನಡೆಯಿತು.

ಅಂಗನವಾಡಿಗಳಿಗೆ ಸ್ಮಾರ್ಟ್ ಟಿವಿ: ಅಂಗನವಾಡಿ ಕೇಂದ್ರದ ಮಗುವಿನ ಪೋಷಕರು ಹಾಗೂ ಗ್ರಾಮ ಪಂಚಾಯತಿ ಸದಸ್ಯರಾದ ಸಣ್ಣಕ್ಕಿ ಲಕ್ಷ್ಮಣ ಅವರು ಅಂಗನವಾಡಿಗಳಿಗೆ ಸ್ಮಾರ್ಟ್ ಟಿವಿ ವಿತರಣೆ ಮಾಡಿದರು.

ಹೊಸ್ಪೂರು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಜಯಪದ್ಮಾ ಅವರು ಸ್ಮಾರ್ಟ್ ಟಿವಿಯನ್ನು ಉದ್ಘಾಟಿಸಿ ಮಾತನಾಡಿ, ಸಣ್ಣಕ್ಕಿ ಲಕ್ಷ್ಮಣ ರವರು ನಮ್ಮ ಗ್ರಾಮ ಪಂಚಾಯತಿ ಸದಸ್ಯರಲ್ಲೆ



ಅತ್ಯಂತ ಕ್ರಿಯಾಶಿಲ ವ್ಯಕ್ತಿ ಹಾಗೂ ಸದಸ್ಯರು. ಇವರು ನಮಗೆಲ್ಲರಿಗೂ ಪ್ರೇರಣೆಯಾಗಿದ್ದಾರೆ. ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಸ್ಮಾರ್ಟ್ ಟಿವಿ ವಿತರಣೆಗೆ ಕ್ರಮ ವಹಿಸಲಾಗುದು. ಅಂಗನವಾಡಿ ಕೇಂದ್ರಗಳಿಗೆ ಸಿಸಿಟಿವಿ ಅಳವಡಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದು ಹೇಳಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಸಿಂದೂ ಅಂಗಡಿ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂಗನವಾಡಿ ಕೇಂದ್ರಕ್ಕೆ ಬರುವಂತಹ ಮಕ್ಕಳ ಕಲಿಕೆಗೋಸ್ಕರ ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. ಸಮುದಾಯದ ಪಾಲ್ಗೊಳ್ಳುವಿಕೆಯು ಅತ್ಯಂತಹ ಮಹತ್ವದ್ದಾಗಿದ್ದು, ಸಮುದಾಯವು ಯಾವಾಗ ಮಕ್ಕಳ ಕಲಿಕೆಗೆ ಹಾಗೂ ಅಂಗನವಾಡಿ ಅಭಿವೃದ್ಧಿಗೆ ಶ್ರಮಿಸುತ್ತದೆ ಆಗ ಮಕ್ಕಳ ಕಲಿಕೆ ಸಧೃಡವಾಗುತ್ತೆ. ಇದರ ಜೊತೆ ಅಂಗನವಾಡಿಯು ಸಹ ಬೆಳೆಯುತ್ತೆ. ಅದಕ್ಕೆ ಇಂದು ನಮ್ಮ ಅಂಗನವಾಡಿ ಕೇಂದ್ರಗಳಿಗೆ ಮಗುವಿನ ಪೋಷಕರು ಹಾಗೂ ಹೊಸ್ಪೂರು ಗ್ರಾಮ ಪಂಚಾಯತಿ ಸದಸ್ಯರಾದ ಸಣ್ಣಕ್ಕಿ ಲಕ್ಷ್ಮಣ ಅವರು ಅತ್ಯಾಧುನಿಕ ಸ್ಮಾರ್ಟ ಟಿವಿಯನ್ನು ಕೊಡುಗೆ ನೀಡಿರುವುದು ಒಳ್ಳಯ ನಿದರ್ಶನವಾಗಿದೆ ಎಂದರು.

ಸಭೆಯಲ್ಲಿ ಗ್ರಾಮ ಪಂಚಾಯತಿ ಸದಸ್ಯರು ಅಂಗನವಾಡಿ ಮಗುವಿನ ಪೋಷಕರಾದ ಸಣ್ಣಕ್ಕಿ ಲಕ್ಷ್ಮಣ, ಚಿತವಾಡಗಿ 1ನೇ ವಲಯದ ಮೇಲ್ವಿಚಾರಕಿಯಾದ ಎ ಲ್ . ಡಿ . ನ ದ್ ಧ ಾ ಪ ್ , ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದ ಅಧಿಕಾರಿಗಾಳಾದ ಕೊಟ್ರೇಶ ಯರಡಕೇರಿ, ಹಲೋ ಪೋಷಕರೆ ಕಾರ್ಯಕ್ರಮದ ಸಂಯೋಜಕರಾದ ಅರ್ಜುನ್, ಹೊಸ್ಪೂರು ಅಂಗನವಾಡಿ ಕೇಂದ್ರದ ಅಂಗನವಾಡಿ ಕಾರ್ಯಕರ್ತೆಯರಾದ ನೇತ್ರಾವತಿ ಹಾಗೂ ಯಶೋದಾ ಮತ್ತು ಅಂಗನವಾಡಿ ಮಕ್ಕಳು ಹಾಗೂ ಪೋಷಕರು ಭಾಗಿಯಾಗಿದ್ದರು.

# ಆರ್.ಡಿ.ಪಿ.ಆರ್ ಇಲಾಖೆಯ ಅಧಿಕಾರಿಗಳು, ನೌಕರರು ಮತ್ತು ಗ್ರಾಪಂ ಸದಸ್ಯರು ಎಲ್ಲಾ ವೃಂದ ಸಂಘಗಳು ಒಕ್ಕೂಟದಿಂದ ವ್ಯವಸ್ಥೆಯ ಉಳಿವಿಗಾಗಿ ಅಕ್ಟೋಬರ್–4 ರಂದು ಬೆಂಗಳೂರು ಚಲೋ – ಫ್ರೀಢಂ ಪಾರ್ಕ್ ನಲ್ಲಿ ಅನಿರ್ದಿಷ್ಠಾವಧಿ ಹೋರಾಟ

● ವಾರ್ತಾಲೋಕ ವಾರ್ತೆ

**ಕುಕುನೂರು :ಅ3.** ತಾಲೂಕ ಪಂಚಾಯತಿ ಕುಕನೂರ ಕಛೇರಿಯಲ್ಲಿ ಯೋಜನಾ ನಿರ್ದೇಶಕರಿಗೆ ಬೆಂಗಳೂರು ಚಲೋ ಹೋರಾಟಕ್ಕೆ ಅನುಮತಿ ನೀಡುವಂತೆ ಆರ್. ಡಿ.ಪಿ.ಆರ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಂದ ಮನವಿ ಸಲ್ಲಿಸಿದರು. ಆರ್.ಡಿ.ಪಿ.ಆರ್ ಇಲಾಖೆಯು ರಾಜ್ಯದ ಶೇ. 20ರಷ್ಟು ಜನರಿಗೆ ವಿವಿಧ ಸೇವೆಗಳನ್ನು ನೀಡುತ್ತಿರುವ ಸ್ಥಳೀಯ ಸಂಸ್ಥೆಯಾದ ಗ್ರಾ.ಪಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಕ್ಲರ್ಕ. ಕಂ ಡಾಟಾ ಎಂಟ್ರಿ ಆಪರೇಟರ್, ಕರವಸೂಲಿಗಾರ, ನೀರಗಂಟಿ, ಜವಾನರು, ಸ್ವಚ್ಚತಾಗಾರರ ಮತ್ತು ಪತ್ರಾಂಕಿತ ಅಧಿಕಾರಿಗಳು ಹಾಗೂ ಗ್ರಾ.ಪಂ ಸದಸ್ಯರ ಒಕ್ಕೂಟದಿಂದ ಸಮಸ್ತ ಅಧಿಕಾರಿಗಳು, ನೌಕರರು ಮತ್ತು ಆಡಳಿತ ವರ್ಗ ಕಾರ್ಯನಿರ್ವಹಣೆಯಲ್ಲಿ ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಪರಿಹರಿಸುವಂತೆ ಸರಕಾರ ಮತ್ತು ಇಲಾಖೆಯ ಗಮನಕ್ಕೆ ತಂದು ಹಲವು ವರ್ಷಗಳು ಕಳೆದಿದ್ದರೂ ಯಾವುದಕ್ಕೂ ಸ್ಪಂದನೆ ಸಿಕ್ಕಿಲ್ಲ. ಈ ನಿಟ್ಟಿನಲ್ಲಿ ಇಲಾಖೆಯ ಧೋರಣೆಯನ್ನು ಖಂಡಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅಕ್ಟೋಬರ್–4 ರಿಂದ ರಾಜ್ಯಾದ್ಯಂತ ಗ್ರಾ.ಪಂ ಸೇವೆಗಳನ್ನು ನಿಲ್ಲಿಸಿ ಅನಿರ್ದಿಷ್ಠಾವಧಿಯ ಹೋರಾಟಕ್ಕೆ ಕರೆ ಕೊಡಲಾಗಿದೆ ಎಂದು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಪ್ರತಿನಿಧಿ ಮತ್ತು ರಾಜ್ಯ ಜಂಟಿ ಕಾರ್ಯದರ್ಶಿಗಳಾದ *ವೀರನಗೌಡ ಚನವೀರಗೌಡ್ರ*

1) ರಾಜ್ಯದ ಎಲ್ಲಾ ಪಿಡಿಒಗಳ ಹುದ್ದೆಗಳನ್ನು ಗೆಜೆಟೆಡ್ ಗ್ರೂಪ್ ಬಿ ದರ್ಜೆಗೆ ಉನ್ನತೀಕರಿಸುವುದು.

2) ಏಳು ವರ್ಷ ಪೂರೈಸಿ ಕರ್ತವ್ಯನಿರ್ವಹಿಸುತ್ತಿರುವ ಪಿಡಿಒಗಳನ್ನು ಬೇರೆ ತಾಲೂಕಿಗೆ ವರ್ಗಾವಣೆ ಮಾಡುವ ನಿಯಮ ಕೈಬಿಡಬೇಕು ಎನ್ನುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು.

3) ದ್ವಿತೀಯ ದರ್ಜೆ ಲೆಕ್ಕ ಸಹಾಯಕರ



ವೃಂದದಿಂದ ಗ್ರೇಡ್–2 ಗ್ರಾ.ಪಂ ಗಳಿಗೂ ದ್ವಿತೀಯ ದರ್ಜೆ ಸಹಾಯಕ ಹುದ್ದೆ ಸೃಜಿಸಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಗ್ರೇಡ್–1 ಗ್ರಾ.ಪಂ ಗಳಿಗೆ ಪ್ರಥಮ ದರ್ಜೆ ಲೆಕ್ಕ ಸಹಾಯಕರಾಗಿ ಮುಂಬಡ್ತಿ ನೀಡುವುದು.

4) ಗ್ರಾ.ಪಂ ಸದಸ್ಯರ ಒಕ್ಕೂಟದ ಬೇಡಿಕೆಗಳಲ್ಲಿ ಸಂವಿಧಾನದ ಪ್ರಕರಣ 243ಜಿ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 58(4) ರ ಅನ್ವಯ ಗ್ರಾಮ ಪಂಚಾಯತ್ಗಳು ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸುವಂತಾಗಲು, ಅಧಿನಿಯಮದ ಪ್ರಕರಣ 58, 60 ಹಾಗೂ 1ನೇ ಅನುಸೂಚಿಯಲ್ಲಿರುವ ಜವಾಬ್ದಾರಿಗಳನ್ನು ನಿರ್ವಹಿಸಲು ಪ್ರಕರಣ 2(28–ಸಿ) ಅನ್ವಯ ಜವಾಬ್ದಾರಿ ನಕ್ಷೆ ರಚಿಸಬೇಕು ಜತೆಗೆ ಕೇರಳ ಮಾದರಿಯ ಗೌರವ ಧನ ಹೆಚ್ಚಳ ಎನ್ನುವುದು.

5) ಕ್ಲರ್ಕ ಕಂ ಡಾಟಾ ಎಂಟ್ರಿ ಆಪರೇಟರ್, ಕರವಸೂಲಿಗಾರರ, ನೀರಗಂಟಿ, ಜವಾನರ, ಸ್ವಚ್ಚತಾಗಾರರ ವೃಂದ (ಪಂಚ ನೌಕರರು) ರವರಿಗೆ ಸೇವಾ ಹಿರಿತನ ವೇತನ ಮತ್ತು ವೇತನ ಹೆಚ್ಚಳದ ಆದೇಶ ಜಾರಿ ಮಾಡುವುದು ಸೇರಿದಂತೆ ಹಲವು ಬೇಡಿಕೆಗಳಿವೆ.

6) ಕಾರ್ಯದರ್ಶಿ ವೃಂದ ಬೇಡಿಕೆ – ಗ್ರೇಡ್ – 1 ಕಾರ್ಯದರ್ಶಿಗಳ ವೃಂದದ ಜೇಷ್ಠತಾ ಪಟ್ಟಿ ಪ್ರಕಟ ಮಾಡಿ ಪಿಡಿಒ ವೃಂದಕ್ಕೆ ಮುಂಬಡ್ತಿ ನೀಡುವುದು.

7) ಗ್ರೇಡ್–2 ಕಾರ್ಯದರ್ಶಿಗಳ ಹುದ್ದೆಯಿಂದ ಬಹುವರ್ಷಗಳ ಬೇಡಿಕೆಯಾದ ಬಡ್ತಿ ನೀಡುವುದು ಸೇರಿದಂತೆ ಹಲವು ಬೇಡಿಕೆಗಳಿವೆ.

8) ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಪತ್ರಾಂಕಿತ ಅಧಿಕಾರಿಗಳ ಸಂಘದ ಬೇಡಿಕೆಯಂತೆ ದಿ. 12–09–2023ರ ಸುತ್ತೋಲೆಯಂತೆ ವೃಂದ ಮತ್ತು ನೇಮಕಾತಿ ನಿಯಮಗಳಡಿ ಅನ್ಯ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ನಿಯೋಜನೆಗೆ ನಿರ್ಬಂಧವಿದ್ದರು ಕೂಡಾ ಇಲಾಖೆಯ ಅನೇಕ ವೃಂದಗಳಲ್ಲಿ ನಿಯೋಜಿಸಿರುವುದನ್ನು ಕೂಡಲೇ ರದ್ದುಪಡಿಸಿ, ಇಲಾಖೆಯ ಅಧಿಕಾರಿಗಳಿಗೆ ಹೆಚ್ಚುವರಿ ಪ್ರಭಾರ ಮತ್ತು ಕಿರಿಯ ಅಧಿಕಾರಿಗಳಿಗೆ ಸ್ವತಂತ್ರ ಪ್ರಭಾರದಲ್ಲಿ ಇರಿಸಲು ಕ್ರಮವಹಿಸಬೇಕು ಎನ್ನುವ ವಿವಿಧ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು *ಅಕ್ಟೋಬರ್–4ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ* ಈ ಬೆಂಗಳೂರು ಚಲೋ ನಡೆಯಲಿದೆ ಎಂದು ವಿವರಿಸಿದರು.

ಸ್ಥಳದಲ್ಲಿ ಸಹಾಯಕ ನಿರ್ದೇಶಕರು ಗ್ರಾಮೀಣ ಉದ್ಯೋಗ ಶರಣಪ್ಪ ಕೆಳಗಿನ ಮನಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ರಮೇಶ್ ತಿಮ್ಮಾರಡ್ಡಿ, ಸಿದ್ದನಗೌಡ ರಬ್ಬನಗೌಡ, ಮಹೇಶ್ ಗೌಡ ಸೋಂಪೂರ, ವೈಜನಾಥ ಸಾರಂಗಮಠ, ಕಾರ್ಯದರ್ಶಿಗಳಾದ ಯಲ್ಲಪ್ಪ ನಿಡಶೇಶಿ, ಮಾರುತಿ ಗೊಂಡಬಾಳ, ಮನು ಚಟ್ಟಿ, ಬಿಲ್ ಕಲೆಕ್ಟರ್ ಆದ ರವಿಂದ್ರ ಜ್ಯೋಷಿ, ಮಂಜುನಾಥ, ಶಿವಶಂಕರ್, ನಾರಾಯಣಿ, ಬಸವರಾಜ ಹುಬ್ಬಳ್ಳಿ, ಕಂಪ್ಯೂಟರ್ ಅಪರೇಟರ್ ಆದ ಗವಿಸಿದ್ದಪ್ಪ ಪಟ್ಟಣಶೆಟ್ಟಿ, ಬಸವರಾಜ ಸೋಂಪೂರ, ಸೇರಿದಂತೆ ಎಲ್ಲ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಜರಿದ್ದರು

**ವರದಿ ಮಂಗಳೇಶ ಎಸ್ ಮೆತಗಲ್**

# ಮಗನ ಸಾವಿಗೆ ನ್ಯಾಯ ಕೊಡಿಸುವವರೆಗೂ ಕದಲಲ್ಲ



**ಜಮಖಂಡಿ:** ನಗರದ ಖಾಸಗಿ ಶಾಲೆ ಹಾಸ್ಟೆಲ್‌ನಲ್ಲಿ ಸಾವಿಗೀಡಾದ ನನ್ನ ಮಗನ ಸಾವಿನಲ್ಲಿ ಸಂಶಯವಿದೆ. ಮಗನ ಸಾವಿಗೆ ನ್ಯಾಯ ಸಿಗಬೇಕೆಂದು ಬಬಲೇಶ್ವರ ತಾಲೂಕಿನ ಕಣಬೂರ ಗ್ರಾಮದ ಮೃತ ವಿದ್ಯಾರ್ಥಿ ಆಕಾಶ ಗುಳೇದಗುಡ್ಡ ಅವರ ತಂದೆ ತಾಯಿ, ಸಂಬಂಧಿಕರು ಕಣ್ಣೀರು ಹಾಕುತ್ತ ಗ್ರಾಮೀಣ ಪೊಲೀಸ್ ಠಾಣೆ ಮುಂದೆ ಭಾನುವಾರ ಪ್ರತಿಭಟಿಸಿದರು.

ಮಗನ ಸಾವಿನ ಕಾರಣ ತಿಳಿಯಲು ಸಿಸಿಟಿವಿ ದೃಶ್ಯಾವಳಿ ನೀಡದ ಶಾಲೆಯವರು, ಪೊಲೀಸರು ನಮಗೆ ಯಾವುದೇ ಮಾಹಿತಿ ಒದಗಿಸುತ್ತಿಲ್ಲ. ಪೊಲೀಸ್ ಠಾಣೆಗೆ ಹೋದರೆ ದಭಾಯಿಸಿ ಹೊರಹಾಕುತ್ತಿದ್ದಾರೆ ಎಂದು ಮೃತ ವಿದ್ಯಾರ್ಥಿ ತಂದೆ ಅಣ್ಣಪ್ಪ ಗುಳೇದಗುಡ್ಡ, ತಾಯಿ ಸಕ್ಕುಬಾಯಿ ಗುಳೇದಗುಡ್ಡ, ಅಜ್ಜಿ ಲಕ್ಷ್ಮೀಬಾಯಿ ಗುಳೇದಗುಡ್ಡ ಹಾಗೂ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದರು.

ಸೆ.23 ರಂದು ಮಧ್ಯಾಹ್ನ ಮಗನಿಗೆ ಆರಾಮ ಇಲ್ಲ ಎಂದು ನಮಗೆ ಫೋನ್ ಮಾಡಿ ಕರೆಯಿಸಿಕೊಂಡಿದ್ದಾರೆ. ಆದರೆ, ಇಲ್ಲಿ ಬಂದು ನೋಡಿದರೆ ಸರ್ಕಾರಿ ಆಸ್ಪತ್ರೆ ಕಿಟಕಿಯಿಂದ ಮಗನ ಮೃತ ಶರೀರ ತೋ–ರಿಸಿದ್ದಾರೆ. ಇದರ ಹಿಂದೆ ಷಡ್ಯಂತ್ರ ನಡೆದಿದೆ ಎಂದು ದೂರಿದರು.

ಹಿಂದೆಯೂ ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಾವುಗಳಾಗಿವೆ. ನನ್ನ ಮಗನಿಗಾದಂತೆ ಬೇರೆ ಮಕ್ಕಳಿಗೆ ಆಗಬಾರದೆಂದು ನಾವು ನ್ಯಾಯ ಕೇಳುತ್ತಿದ್ದೇವೆ ಎಂದರು. ಶಾಲಾ ಹಾಸ್ಟೆಲ್‌ನ ಪ್ರತಿ ಕೊಠಡಿಗೂ ಸಿಸಿಟಿವಿ ಕ್ಯಾಮರಾಗಳಿದ್ದರೂ ನಮಗೆ ದೃಶ್ಯಾವಳಿ ಏಕೆ ಕೊಡುತ್ತಿಲ್ಲ ಎಂದು ಪ್ರಶ್ನಿಸಿದರಲ್ಲದೆ, ಈ ಪ್ರಕರಣ ಮುಚ್ಚಿಹಾಕಲು ನಾವು ಬಿಡಲ್ಲ. ಮೇಲಧಿಕಾರಿಗಳ ಕಚೇರಿಗೆ ಹೋಗುತ್ತೇವೆ. ನಮ್ಮ ಮಗ ಓದಿನಲ್ಲಿ, ಶಾರೀರಿಕವಾಗಿ ಸದೃಢನಾಗಿದ್ದು, ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಹೇಡಿಯಲ್ಲ ಎಂದರು.

ಗದರಿಸಿ ಎಬ್ಬಿಸಿದ ಸಿಪಿಐ: ಮಗನ ಸಾವಿಗೆ ನ್ಯಾಯ ಸಿಗಬೇಕು ಎಂದು ಮೃತ ವಿದ್ಯಾರ್ಥಿ ತಂದೆ, ತಾಯಿ, ಅಜ್ಜಿ, ಸಂಬಂಧಿಕರು ಗ್ರಾಮಿಣ ಪೋಲೀಸ್ ಠಾಣೆ ಮುಂದೆ ಭಾನುವಾರ ಪ್ರತಿಭಟನೆ ನಡೆಸುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಸಿಪಿಐ ಮಲ್ಲಪ್ಪ ಮಡ್ಡಿ ಏರುಧ್ವನಿಯಲ್ಲಿ ಇದು ಪೊಲೀಸ್ ಠಾಣೆ. ಇಲ್ಲಿ ಕುಳಿತುಕೊಳ್ಳಬೇಡಿ ಎಂದು ದಭಾಯಿಸಿದಾಗ, ನಮ್ಮ ಮಗನ ಸಾವಿಗೆ ನ್ಯಾಯ ಸಿಗುವವರೆಗೂ ನಾವು ಏಳಲ್ಲ ಎಂದು ವಿದ್ಯಾರ್ಥಿ ಪಾಲಕರು ಪಟ್ಟುಹಿಡಿದರು. ಆಗ ಸಿಪಿಐ ನಿಮ್ಮದು ಏನಿದೆ ಬರೆದು ಕೊಡಿ, ನಾನೇ ನ್ಯಾಯ ಕೊಡಿಸುವೆ ಎಂದು ಪ್ರತಿಭಟನಾಕಾರರನ್ನು ತಮ್ಮ ಕಚೇರಿಗೆ ಕರೆದೊಯ್ದರು.

ಎಫ್‌ಐಆರ್ ದಾಖಲು: ನಗರದ ರಾಯಲ್ ಪ್ಯಾಲೇಸ್ ಶಾಲೆಯಲ್ಲಿ ಕಣಬೂರದ ಆಕಾಶ ಅಣ್ಣಪ್ಪ ಗುಳೇದಗುಡ್ಡ(17) ಪ್ರಥ–'ಮ ವಿಜ್ಞಾನ ವಿಭಾಗದಲ್ಲಿ ಓದುತ್ತಿದ್ದನು. ತನಗೆ ವಿಜ್ಞಾನ ವಿಷಯ ತಲೆಗೆ ಹತ್ತದೆ ಇದ್ದುದ್ದ–ರಿಂದ ಹಾಗೂ ಕಿಡ್ನಿ ಸ್ಟೋನ್ ಬಗ್ಗೆ ಆಸ್ಪತ್ರೆಗೆ ತೋರಿಸಿದರೂ ಕಡಿಮೆ ಆಗಿಲ್ಲ ಎಂದು ಮನಸ್ಸಿಗೆ ಹಚ್ಚಿಕೊಂಡು ತಾನು ಓದುತ್ತಿದ್ದ ಶಾಲೆಯ ಹಾಸ್ಟೆಲ್ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮರಣದಲ್ಲಿ ಬೇರಾವ ಸಂಶಯವಿಲ್ಲ ಎಂದು ಸೆ.23 ರಂದು ಗ್ರಾಮೀಣ ಠಾಣೆ ಪಿಎಸ್‌ಐ ಜಿ.ಎಂ. ಪೂಜಾರ ಪ್ರಕರಣ ದಾಖಲಿಸಿಕೊಂಡಿದ್ದರು.

# ಮೈಸೂರು ತಂಡಕ್ಕೆ ಸಮಗ್ರ ವೀರಾಗ್ರಣಿ



**ಬಾಗಲಕೋಟೆ:** ನಗರದ ಬಸವೇಶ್ವರ ಪ್ರೌಢಶಾಲೆ ಮೈದಾನದಲ್ಲಿ ಭಾನುವಾರ ಮುಕ್ತಾಯಗೊಂಡ ಕಿವುಡರ ರಾಜ್ಯಮಟ್ಟದ 14ನೇ ಕ್ರೀಡಾಕೂಟದಲ್ಲಿ 173 ಅಂಕಗಳನ್ನು ಪಡೆಯುವ ಮೂಲಕ ಮೈಸೂರು ಕ್ರೀಡಾಪಟುಗಳು ಸಮಗ್ರ ವೀರಾಗ್ರಣಿ ಪಡೆದುಕೊಂಡಿದ್ದಾರೆ. 103 ಅಂಕಗಳನ್ನು ಗಳಿಸಿದ ಬೆಂಗಳೂರು ತಂಡ ದ್ವಿತೀಯ ಸ್ಥಾನ ಹಾಗೂ 64 ಅಂಕಗಳನ್ನು ಪಡೆದ ಮಂಡ್ಯ ಜಿಲ್ಲೆ ಕ್ರೀಡಾಪಟುಗಳು ತೃತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದಾರೆ. ಅತಿಥೇಯ ಬಾಗಲಕೋಟೆ ತಂಡ 29 ಅಂಕಗಳನ್ನು ಗಳಿಸುವ ಮೂಲಕ 7ನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿತು. ಕರ್ನಾಟಕ ಕಿವುಡರ ಕ್ರೀಡಾ ಒಕ್ಕೂಟದ ಸಹಯೋಗದಲ್ಲಿ ಬಾಗಲಕೋಟೆ ಜಿಲ್ಲಾ ಕಿವುಡರ ಸಂಘ ಸೆ.27 ರಿಂದ ಮೂರು ದಿನಗಳ ಕಾಲ ಕ್ರೀಡಾಕೂಟ ಆಯೋಜಿಸಲಾಗಿ–ತ್ತು. 12 ವರ್ಷದಿಂದ 18 ವರ್ಷ ಮೇಲ್ಪಟ್ಟ 126 ವಿದ್ಯಾರ್ಥಿನಿಯರು ಸೇರಿ ಒಟ್ಟು ರಾಜ್ಯದ 20 ಜಿಲ್ಲೆಗಳ 465 ಕ್ರೀಡಾಪಟುಗಳು ಭಾಗವಹಿಸಿದ್ದರು. ಸಂಜ್ಞೆ ಭಾಷೆ ಹಾಗೂ ಧ್ವಜದ ಚಿಹ್ನೆಗಳನ್ನು ನೋಡುವ ಮೂಲಕ ಕ್ರೀಡೆಗಳಲ್ಲಿ ಸೆಣಸಾಟ ಆರಂಭಿಸುತ್ತಿದ್ದ ಕ್ರೀಡಾಪಟುಗಳು ಕೊನೆಯ ಕ್ಷಣದವರೆಗೂ ರೋಚಕವಾಗಿ ಹೋರಾಟನಡೆಸಿಗಮನಸೆಳೆದರು. ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದಿದ್ದ ಎಲ್ಲ ಕ್ರೀಡಾಪಟುಗಳಿಗೂ ಬಾಗಲಕೋಟೆ ಜಿಲ್ಲಾ ಕಿವುಡರ ಸಂಘದ ವತಿಯಿಂದ ಊಟ ಹಾಗೂ ಪ್ರತ್ಯೇಕ ವಸತಿ ವ್ಯವಸ್ಥೆ ಕಲ್ಪಿಸಲಾಗಿತ್ತು.

# ದೋಸ್ತಿಗಳ ನೀತಿ ವಿರೋಧಿಸಿ ಪ್ರತಿಭಟನೆ




**ಬಾಗಲಕೋಟೆ:** ಬಡವರ ಪರ ಕಾರ್ಯ ನಿರ್ವಹಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಒತ್ತಾಯಿಸುತ್ತಿರುವ ಬಿಜೆಪಿ, ಜೆಡಿಎಸ್ ನೀತಿ ವಿರೋsಸಿ ಅಹಿಂದ ವತಿಯಿಂದ ಮುಂದಿನ ದಿನಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಅಹಿಂದ ರಾಜ್ಯ ಘಟಕದ ಅಧ್ಯಕ್ಷ ಪ್ರಭುಲಿಂಗ ದಂಡಿವನರ ಹೇಳಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಪಾತ್ರವಿಲ್ಲ. ಆದರು ಸಹ ಬಿಜೆಪಿ, ಜೆಡಿಎಸ್ ಇದನ್ನು ರಾಜಕೀಯ ದಾಳವಾಗಿ ಉಪಯೋಗ ಮಾಡಿಕೊಳ್ಳುತ್ತಿವೆ. ತನಿಖೆ ಎದುರಿಸಲು ಸಿದ್ದರಾಮಯ್ಯ ಅವರು ಸಿದ್ದರಿದ್ದಾರೆ. ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ರಾಜ್ಯ ಕಾಂಗ್ರೆಸ್ ಸರ್ಕಾರ ಅಭದ್ರಗೊಳಿಸುವ ಪ್ರಯತ್ನ ಮಾಡುತ್ತಿದೆ ಎಂದು ದೂರಿದರು.

ಕೇಂದ್ರ ಸರ್ಕಾರದ ಹಲವು ಸಚಿವರ ವಿರುದ್ಧ ಎಫಐಆರ್ ದಾಖಲಾಗಿದೆ. ಅವರೆಲ್ಲರೂ ಸಚಿವರಾಗಿ ಮುಂದುವರೆದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುತ್ತಿದ್ದಾರೆ. ಬಿಜೆಪಿ, ಜೆಡಿಎಸ್ ನಾಯಕರು ಡಬಲ್ ಸ್ಟ್ಯಾಂಡರ್ಡ್ ಅನುಸರಿಸುತ್ತಿದ್ದಾರೇ, ಇದಕ್ಕೆ ಜಗ್ಗುವದಿಲ್ಲ. ಬಗ್ಗುವದಿಲ್ಲ. ಸಿದ್ದರಾಮಯ್ಯ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷೆ ರಕ್ಷಿತಾ ಈಟಿ ಮಾತನಾಡಿ, ರಾಜಕೀಯ ಕಾರಣಕ್ಕಾಗಿ ಸಿದ್ದರಾಮಯ್ಯ ಅವರನ್ನು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಲುಕಿಸಿರುವುದು ಬೇಸರ ತರಿಸಿದೆ. 40 ವರ್ಷಗಳಿಂದ ರಾಜಕೀಯ ಮಾಡಿಕೊಂಡು ಬಂದಿರುವ ಸಿದ್ದರಾಮಯ್ಯ ಅವರು ಆರೋಪಮುಕ್ತರಾಗಿ ಹೊರ ಬರಲಿದ್ದಾ ಎಂದರು.

ಮುಖಂಡರಾದ ರಾಮು ರಾಕುಂಪಿ, ಆದರ್ಶ ನಾಶಿ, ಮಂಜುಳಾ ಭೂಸಾರೆ, ಮುತ್ತಣ್ಣ ಬಿ.ಇದ್ದರು.

# ನ್ಯಾಷನಲ್ ಗೇಮ್ ನಲ್ಲಿ ಮಿಂಚಲಿ



**ಬಾಗಲಕೋಟೆ:** ರಾಜ್ಯಮಟ್ಟದ ಕ್ರೀಡಾಕೂಟಗಳು ಸಾಮಾನ್ಯ ಮಕ್ಕಳಲ್ಲೂ ಉತ್ಸಾಹ ಮೂಡಿಸಿವೆ ಎಂದು ಉದ್ಯಮಿ ರಾಘವೇಂದ್ರ ಕಂದಕೂರ ಹೇಳಿದರು.

ನಗರದ ಬಸವೇಶ್ವರ ಪ್ರೌಢಶಾಲೆ ಮೈದಾನದಲ್ಲಿ ಭಾನುವಾರ ಮುಕ್ತಾಯಗೊಂಡ ಕಿವುಡರ ರಾಜ್ಯಮಟ್ಟದ 14ನೇ ಕ್ರೀಡಾಕೂಟದಲ್ಲಿ ಮಾತನಾಡಿದರು.

ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ಶ್ರೀಲತಾ ಹೆರಂಜಲ್ ಮಾತನಾಡಿ, ಎಲ್ಲ ಜಿಲ್ಲೆಯ ಮಕ್ಕಳು ಅತ್ಯಂತ ಉತ್ಸಾಹದಿಂದ ಆಟಗಳಲ್ಲಿ ಭಾಗವಹಿಸಿ ಕ್ರೀಡಾಮನೋಭಾವ ಮೆರೆದಿದ್ದಾರೆ. ಇಲ್ಲಿ ಗೆದ್ದ ಪ್ರತಿಭೆಗಳು ರಾಷ್ಟ್ರಮಟ್ಟದಲ್ಲೂ ಉತ್ತಮ ಪ್ರದರ್ಶನ ತೋರಿ ರಾಜ್ಯದ ಕೀರ್ತಿ ಬೆಳಗಲಿ ಎಂದು ಹಾರೈಸಿದರು.

ಉದ್ಯಮಿಗಳಾದ ವಿಶ್ವನಾಥ ಗುಳೇದ, ರಾಮಚಂದ್ರ ಚಾವಲಾ, ಕರ್ನಾಟಕ ಕಿವುಡರ ಕ್ರೀಡಾ ಒಕ್ಕೂಟದ ಉಪಾಧ್ಯಕ್ಷ ಕಾಡಪ್ಪ ಗುಡದಿನ್ನಿ ಕ್ರೀಡಾಪಟುಗಳಿಗೆ ಶುಭ ಕೋರಿದರು.

ಇನ್ನರ್‌ವೀಲ್ ಕ್ಲಬ್‌ನ ಸಂಧ್ಯಾ ಮಿಸ್ಕಿನ್, ಸುಮಂಗಲಾ ಹದ್ಲಿ, ವೀಣಾ ವಾಘ, ಜಯಲಕ್ಷ್ಮೀ ಪಾಟೀಲ, ಪೂರ್ಣಿಮಾ ಅಕ್ಕಿಮರಡಿ, ರಮೇಶ ಪಡಸಲಗಿ, ಬಾಗಲಕೋಟೆ ಜಿಲ್ಲಾ ಕಿವುಡರ ಸಂಘದ ಅಧ್ಯಕ್ಷ ಸುನೀಲ ಕಂದಕೂರ, ಕಾಯದರ್ಶಿ ರಾಘವೇಂದ್ರ ಜಾಧವ ಇತರರಿದ್ದರು.

# ಜಾಗ ನೀಡಿದರೆ ಸಾವಳಗಿಯಲ್ಲಿ ಡಿಪೋ ನಿರ್ಮಾಣ



**ಜಮಖಂಡಿ:** ಸಾರಿಗೆ ಸಂಸ್ಥೆಗಳಲ್ಲಿ ಒಂದು ಸಾವಿರ ಚಾಲಕರು, ನಿರ್ವಾಹಕರ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಈಗಾಗಲೇ ಒಂದು ಸಾವಿರ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಸಿಬ್ಬಂದಿ ಕೊರತೆ ಉಂಟಾಗುವುದಿಲ್ಲ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ತಾಲೂಕಿನ ಸಾವಳಗಿ ಗ್ರಾಮದಲ್ಲಿ ನೂತನ ಬಸ್ ನಿಲ್ದಾಣವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಿಬ್ಬಂದಿ ಅಪಘಾತ ಪರಿಹಾರವನ್ನು ನಾವು ಒಂದು ಕೋಟಿ ರೂ.ಗೆ ಹೆಚ್ಚಿಸಿದ್ದೇವೆ. ಇಷ್ಟು ದೊಡ್ಡ ಮೊತ್ತವನ್ನು ಆರ್ಮಿಯಲ್ಲೂ ನೀಡುವುದಿಲ್ಲ. ಹೊಸ ಬಸ್‌ಗಳನ್ನು ಖರೀದಿಸುತ್ತಿದ್ದೇವೆ. ಸಾರಿಗೆ ಇಲಾಖೆಯನ್ನು ಬಹಳಷ್ಟು ಸುಧಾರಣೆ ಮಾಡುತ್ತಿದ್ದೇವೆ ಎಂದರು.

ಸಾವಳಗಿಯಲ್ಲಿ ಡಿಪೋ ನಿರ್ಮಿಸಲು ಜಾಗ ನೀಡಿದರೆ ಆದ್ಯತೆ ಅನುಸಾರವಾಗಿ ನಿರ್ಮಿಸಲಾಗುವುದು ಎಂದರು.

ಶಾಸಕ ನಾಡೋಜ ಜಗದೀಶ ಗುಡಗುಂಟಿ ಮಾತನಾಡಿ, ಮುಂದಿನ ದಿನಗಳಲ್ಲಿ ಸಾವಳಗಿ ತಾಲೂಕು ಕೇಂದ್ರವಾಗುತ್ತದೆ. ಆ ನಿಟ್ಟಿನಲ್ಲಿ ಇಲ್ಲಿ ಡಿಪೋ ಸ್ಥಾಪಿಸಬೇಕು. ಜಮಖಂಡಿ ಬಸ್ ನಿಲ್ದಾಣ ಬಹಳಷ್ಟು ರಿಪೇರಿ ಕಾರ್ಯವಾಗಬೇಕಿದೆ. ಮಳೆಗಾಲದಲ್ಲಿ ಬಸ್ ನಿಲ್ದಾಣ ಆವರಣದಲ್ಲಿ ನೀರು ನಿಲ್ಲುತ್ತಿದೆ. ಜಮಖಂಡಿಯಿಂದ ಬೆಂಗಳೂರು ಕೇಂದ್ರ ಸ್ಥಾನಕ್ಕೆ ತೆರಳಲು ಎಸಿ ಬಸ್, ಪಲ್ಲಕ್ಕಿ ಸೇರಿ 4 ಬಸ್‌ಗಳನ್ನು ನೀಡಬೇಕು ಎಂದರು.

ಕಾಗವಾಡ ಶಾಸಕ ರಾಜು ಕಾಗೆ, ವಾಕಸಾಸಂಸ್ಥೆ ಉಪಾಧ್ಯಕ್ಷ ಪೀರಸಾಬ್ ಕೌತಾಳ, ಗ್ರಾಪಂ ಅಧ್ಯಕ್ಷೆ ಕವಿತಾ ಪಾಟೋಳಿ ಇದ್ದರು. ಜಿಲ್ಲಾ ಸಾರಿಗೆ ಅಧಿಕಾರಿ ಪಿ.ವಿ.ಮೇತ್ರಿ ಸ್ವಾಗತಿಸಿದರು.

# ಭಗತ್‌ಸಿಂಗ್ ಚಿಂತನೆಗಳು ಯುವಕರ ಬದುಕಿಗೆ ಮಾರ್ಗದರ್ಶಿ: ಸಂತೋಷ ಬಂಡೆ



**ವಿಜಯಪುರ :** ಭಗತ್ ಸಿಂಗ್ ಅವರ ಹೋರಾಟ, ತ್ಯಾಗ, ಬಲಿದಾನ ಹಾಗೂ ಚಿಂತನೆಗಳು ಇಂದಿನ ಯುವಕರ ಬದುಕಿಗೆ ಮಾರ್ಗದರ್ಶಿ ಎಂದು ಶಿಕ್ಷಕ ಸಾಹಿತಿ ಸಂತೋಷ ಬಂಡೆ ಹೇಳಿದರು.

ವಿಜಯಪುರ ತಾಲೂಕಿನ ನಾಗಠಾಣ ಗ್ರಾಮದ ಗ್ರಂಥ–ಾಲಯದಲ್ಲಿ ಶನಿವಾರದಂದು ಭಗತಸಿಂಗ್ ಅವರ ಜಯಂತಿ ಆಚರಣೆಗೆ ಚಾಲನೆ ನೀಡಿ ಮಾತನಾಡಿದರು.

ಮಾನವನಿಂದ ಮಾನವನ ಶೋಷಣೆ ತಡೆಗಟ್ಟುವ, ಅಸಮಾನತೆಯನ್ನು ತೊಡೆದು ಹಾಕುವ ಸಮಾಜವಾದಿ ಭಾರತ ನಿರ್ಮಾಣ ಭಗತ್‌ಸಿಂಗ್ ಕನಸಾಗಿತ್ತು. ಭಗತ್ ಸಿಂಗ್ ಅವರ ಆಲೋಚನೆಗಳು, ಅವರ ಕ್ರಾಂತಿಕಾರಿಮನೋಭಾವಹಾಗೂ ನ್ಯಾಯ–ಸ್ವಾತಂತ್ರ್ಯಕ್ಕಾಗಿನ ಅವರ ನಿರಂತರ ಬದ್ಧತೆ ಇಂದಿಗೂ ಪ್ರೇರಣಾದಾಯಕ ಎಂದು ಹೇಳಿದರು.

ಗ್ರಂಥಪಾಲಕ ಮಂಜುನಾಥ ಗಂಗನಳ್ಳಿ ಮಾತನಾಡಿ, ಕೇವಲ ತನಗಾಗಿ ಬದುಕದೇ ಇಡೀ ಜೀವನವನ್ನೇ ದೇಶದ ವಿಮೋಚನೆಗೋಸ್ಕರ ಮೀಸಲಿಟ್ಟ ಭಗತ್‌ಸಿಂಗ್ ಇಂದು ನಮಗೆ ಆದರ್ಶವಾಗಬೇಕಾಗಿದೆ ಎಂದು ಹೇಳಿದರು.

ಇಂಡಿ ಸರಕಾರಿ ಐಟಿಐ ಕಾಲೇಜಿನ ಪ್ರಭಾರಿ ಪ್ರಾಚಾರ್ಯ ಪರಶುರಾಮ ರಜನಿಕರ ಅಧ್ಯಕ್ಷತೆ ವಹಿಸಿ ಮಾತನಾಡಿ, ಯುವಜನರ ನೈತಿಕತೆಯನ್ನು ನಾಶ ಮಾಡಲು ಅಶ್ಲೀಲ ಸಿನಿಮಾ, ಸಾಹಿತ್ಯ, ಮಾದಕ ದ್ರವ್ಯ, ಮದ್ಯಪಾನ, ವ್ಯಾಪಕವಾಗುತ್ತಿದೆ. ಇಂದಿನ ಯುವ ಪೀಳಿಗೆ ಭಗತ್‌ಸಿಂಗ್ ಅವರ ಚಿಂತನೆಗಳನ್ನು ಇನ್ನಷ್ಟು ಮನನ ಮಾಡಿಕೊಳ್ಳುತ್ತಾ ಇಂದಿನ ಸಮಸ್ಯೆಗಳನ್ನು ವೈಚಾ–ರಿಕವಾಗಿ, ನೈತಿಕತೆಯೊಂದಿಗೆ ಪರಿಹರಿಸಿಕೊಳ್ಳಬೇಕು ಎಂದು ಹೇಳಿದರು.

ಅನಂದ ಗಂಗನಳ್ಳಿ, ಚನ್ನಪ್ಪ ಹಂಡಿ, ಶರಣಬಸು ಹಂಡಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಭಾರತದ ಆತ್ಮಭಾಷೆ ಸಂಸ್ಕೃತದಲ್ಲಿದೆ ವಿಜ್ಞಾನದ ಮೂಲ



**ಮಹಾಲಿಂಗಪುರ:** ಸಂಸ್ಕೃತ ಭಾಷೆಯ ಗ್ರಂಥಗಳಲ್ಲಿ ಮತ್ತು ಸನಾತನ ಸಂಸ್ಕೃತಿಯ ಆಚರಣೆಯಲ್ಲಿ ವೈಜ್ಞಾನಿಕ ತಳಹದಿ ಹಿನ್ನೆಲೆ ಇದ್ದೇ ಇರುತ್ತದೆ. ಸಂಸ್ಕೃತದಲ್ಲಿರುವ ವಿಚಾರಗಳೇ ಬದಲಾದ ರೂಪದಲ್ಲಿ ವಿಜ್ಞಾನದ ಸ್ವರೂಪ ಪಡೆಯುತ್ತಿವೆ ಎಂದು ವಿಜಯಪುರದ ಸಂಸ್ಕೃತ ಸಾಧಕ ಸಿದ್ದಲಿಂಗ ಆಚಾರ್ಯ ಹೇಳಿದರು.

ಸ್ಥಳೀಯ ಎಸ್‌ಸಿಪಿ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಜರುಗಿದ ಅಸ್ಮಾಕಂ ಸಂಸ್ಕೃತಂ ಸರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತದ ಆತ್ಮಭಾಷೆಯಾದ ಸಂಸ್ಕೃತದಲ್ಲಿ ವಿಜ್ಞಾನದ ಮೂಲ ಅಡಗಿದೆ ಎಂದರು.

ಉಪನ್ಯಾಸಕ ಶಿವಲಿಂಗ ಸಿದ್ನಾಳ ಮಾತನಾಡಿ, ಸಂಸ್ಕೃತ ಭಾಷೆ ಎಲ್ಲ ಭಾಷೆಗಳ ತಾಯಿಯಾಗಿದೆ. ಶ್ರೇಷ್ಠ ಭಾಷೆ ಬಗ್ಗೆ ವಿದೇಶಗಳಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಆದರೆ ಭಾರತದಲ್ಲಿ ಈ ಭಾಷೆ ಉದಾಸೀನಕ್ಕೊಳಗಿರುವುದು ದುರದೃಷ್ಟಕರ.

ಎಲ್ಲ ಶಾಲೆ, ಕಾಲೇಜುಗಳಲ್ಲಿ ಸಂಸ್ಕೃತ ಕಡ್ಡಾಯ ಕಲಿಕಾ ಭಾಷೆಯಾಗಬೇಕು ಎಂದರು.

ಬೆಂಗಳೂರಿನ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ಮಹಾಲಿಂಗಪುರದ ಅಮರವಾಣಿ ಸಂಸ್ಕೃತ ಪಾಠಶಾಲೆ, ಅಕ್ಕಿಮರಡಿಯ ಸಂಗಮೇಶ್ವರ ಸಂಸ್ಕೃತ ಪಾಠಶಾಲೆ, ಹನ್ನೂರಿನ ಭುವನೇಶ್ವರಿ ಸಂಸ್ಕೃತ ಪಾಠಶಾಲೆ, ಮಹಾಲಿಂಗಪುರದ ಎಸ್‌ಸಿಪಿ ಪ್ರೌಢಶಾಲೆ ಆಶ್ರಯದಲ್ಲಿ ನಡೆದ ಕಾರ್ಯಕ್ರಮಕ್ಕೂ ಮುನ್ನ ಸಂಸ್ಕೃತ ಭಾಷಾ ಘೋಷಣಾ ಲಕಗಳನ್ನು ಪ್ರದರ್ಶಿಸುತ್ತ ನಾಲ್ಕೂ ಶಾಲೆಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪಟ್ಟಣದಲ್ಲಿ ಜಾಗೃತಿ ಮೂಡಿಸಿದರು.

ವಿದ್ಯಾರ್ಥಿಗಳು ಸಂಸ್ಕೃತ ಶ್ಲೋಕ ಹೇಳಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿಗಳಿಗೆ ತಲಾ ಒಂದೊಂದು ಭಗವದ್ಗೀತೆ ಕೈಪಿಡಿ ಮತ್ತು ಹೂವಿನ ಗಿಡ ವಿತರಿಸಿ ಗೌರವಿಸಲಾಯಿತು. ಎಸ್‌ಸಿಪಿ ಪ್ರೌಢಶಾಲೆ ಉಪಪ್ರಾಂಶುಪಾಲ ಬಿ.ಎನ್.ಅರಕೇರಿ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಶಿಕ್ಷಕರಾದ ಎಸ್.ಐ.ಬಾಳಿಗಿಡದ, ಎಸ್.ಎಸ್. ಜಗದಾಳ, ಎಸ್.ಜಿ.ಯಾದವಾಡ, ಮುಖ್ಯ ಶಿಕ್ಷಕಿ ಎಂ.ಎಸ್. ಮಗದುಂ, ವಿ.ಕೆ.ನೀಲಕಂಠಮಠ, ಜೆ.ಸಿ.ಬೆಟಗೇರಿ, ಎಸ್.ಐ. ಕಂದಗಲ್ಲ, ಮಹಾಂತೇಶ ಅಂಗಡಿ, ಎಸ್.ಎಚ್.ಪುರಾಣಿಕ ಇದ್ದರು.

# ಬಡ ಹೃದಯ ರೋಗಿಗಳಿಗೆ ಆರ್ಥಿಕ ಸಹಾಯ



**ಬಾಗಲಕೋಟೆ:** ನಗರದ ಬಿವಿವಿ ಸಂಘದ ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನ ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆಯಲ್ಲಿ ಭಾನುವಾರ ವಿಶ್ವ ಹೃದಯ ದಿನದ ಅಂಗವಾಗಿ ಇನ್ನರ್‌ವ್ಹೀಲ್ ಸಂಸ್ಥೆಯಿಂದ ಬಡ ಹೃದಯ ರೋಗಿಗಳಿಗೆ ಆರ್ಥಿಕ ಧನ ಸಹಾಯ ನೀಡಿ ಮಾನವೀಯತೆ ಮೆರೆದರು.

ಬಾಗಲಕೋಟೆ ಇನ್ನರವ್ಹೀಲ್ ಸಂಸ್ಥೆಯ ಅಧ್ಯಕ್ಷೆ ಶ್ರೀಲತಾ ಹೆರಂಜಲ್, ಕಾರ್ಯದರ್ಶಿ ಸುಮಂಗಲಾ ಹದ್ಲಿ ನೇತೃತ್ವದಲ್ಲಿ ಕುಮಾರೇಶ್ವರ ಆಸ್ಪತ್ರೆಯ ಹೃದಯ ರೋಗ ವಿಭಾಗದಲ್ಲಿ ಐದು ಜನ ಬಡ ಹೃದಯ ರೋಗಿಗಳ ಎಂಜಿಯೋಗ್ರಫಿ ಚಿಕಿತ್ಸೆಗೆ ಆರ್ಥಿಕ ಧನಸಹಾಯದ ಚಕ್‌ನ್ನು ಆಸ್ಪತ್ರೆಯ ಅಧೀಕ್ಷಕ ಡಾ.ಶ್ರೀರಾಮ ಕೋರಾ ಅವರಿಗೆ ಹಸ್ತಾಂತರಿಸಲಾಯಿತು. ಅಲ್ಲದೆ ರೋಗಿಗಳಿಗೆ ಹಣ್ಣು ಹಂಪಲಗಳನ್ನು ಸಹ ವಿತ–ರಿಸಲಾಯಿತು. ಈ ಸಂದರ್ಭದಲ್ಲಿ ಹೃದಯರೋಗ ವಿಭಾಗದ ಡಾ.ಸ ವಿ ೦ ೯ ರ ಕ ು ವ ಾ ರ ಕುಲಕರ್ಣಿ, ಡಾ.ಸಾಗರ ದೇಸಾಯಿ, ಇನ್ನರವ್ಹೀಲ್ ಸಂಸ್ಥೆಯ ಸಂಧ್ಯಾ ಮಿಸ್ಕಿನ್, ವೀಣಾ ವಾಘ, ಪೂರ್ಣಿಮಾ ಅಕ್ಕಿಮರಡಿ ಮತ್ತು ಜಯಲಕ್ಷ್ಮೀ ಪಾಟೀಲ ಉಪಸ್ಥಿತರಿದ್ದರು.

# ಜೀವ ವಿಮೆ ಅಧಿಕಮಟ್ಟದಲ್ಲಿ ಮಾಡಿಸಿ



**ಬಾದಾಮಿ:** ಭಾರತೀಯ ಜೀವ ವಿಮಾ ನಿಗಮದ ಪ್ರತಿನಿಧಿಗಳು ಜೀವ ವಿಮೆಯನ್ನು ಹೆಚ್ಚಿನ ಮಟ್ಟದಲ್ಲಿ ಮಾಡಿಸುವ ಮೂಲಕ ನಮ್ಮ ಬಾದಾಮಿ ಶಾಖೆಯನ್ನು ಮೊದಲ ಸ್ಥಾನಕ್ಕೇರಿಸಬೇಕೆಂದು ಶಾಖಾಧಿಕಾರಿ ಆರ್.ಬಿ. ಚವ್ಹಾಣ ಸಲಹೆ ನೀಡಿದರು.

ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಶನಿವಾರ ಜರುಗಿದ ಭಾರತೀಯ ಜೀವ ವಿಮಾ ನಿಗಮದ ಪ್ರತಿನಿಧಿಗಳ ಕ್ಷೇಮಾಭಿವದ್ಧಿ ಸಂಘದ ವಾರ್ಷಿಕ ಸಭೆ ಹಾಗೂ ಶೈಕ್ಷಣಿಕ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ವಿವಿಧ ವಿಮೆಗಳನ್ನು ಮಾಡಿಸುವ ಮೂಲಕ ಜನತೆ ನೆಮ್ಮದಿಯ ಜೀವನ ನಡೆಸಬೇಕೆಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಸಂಘದ ತಾಲೂಕಾಧ್ಯಕ್ಷ ದ್ಯಾಮನಗೌಡ ಗೌಡರ ಮಾತನಾಡಿ, ನಮ್ಮ ನಿಗಮದ ಪ್ರತಿನಿಧಿಗಳು ಕ್ಷೇಮಾಭಿವದ್ಧಿ ಸಂಘದ ವತಿಯಿಂದ ಹತ್ತು ಹಲವಾರು ಸಮಾಜಮುಖಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಪ್ರತಿ ವರ್ಷ ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಉಪನ್ಯಾಸಕರಾಗಿ ಆಗಮಿಸಿದ್ದ ಡಾ. ಸುರೇಶ ಪರ್ವತೀಕರ ಮಾತನಾಡಿ, ನಮ್ಮ ನಿಗಮದ ಪ್ರತಿನಿಧಿಗಳು ಜನರೊಂದಿಗೆ ಉತ್ತಮ ಒಡನಾಟವನ್ನು ಇಟ್ಟುಕೊಂಡು ಅವ–ರಿಂದ ಹೆಚ್ಚಿನ ವಿಮೆ ಮಾಡಿಸಿ ನಿಗಮದ ಬೆಳವಣಿಗೆಗೆ ಸಹಕಾರ ನೀಡಬೇಕೆಂದು ಹೇಳಿದರು.

ವೇದಿಕೆಯಲ್ಲಿ ಉಪ ಶಾಖಾಧಿಕಾರಿ ಜೆ.ಸಿ. ಜಾಧವ, ವಿಭಾಗೀಯ ಕಾರ್ಯದರ್ಶಿ ಎಂ.ಎಂ. ರೇಶ್ಮಿ, ಜಿ.ವೈ. ಸತರಡ್ಡಿ, ಎನ್.ಜಿ. ಹಿರೇಮಠ, ಎನ್.ಟಿ.ಅಬಕಾರಿ, ಜಗದೀಶ ಮಲ್ಲಾಪೂರ, ವಿಠ್ಠಲ ಪ್ರಜಾರ ಉಪಸ್ಥಿತರಿದ್ದರು.

ಪ್ರತಿನಿಧಿ ಶಿವಲಿಂಗಪ್ಪ ಡಿ. ಯಲಿಗಾರ ಸ್ವಾಗತಿಸಿ, ನಿರೂಪಿಸಿದರು. ಹೊನ್ನಯ್ಯ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್.ಜಿ. ಗೌಡರ ವಂದಿಸಿದರು.

# ಪರಿಸರ ಸಂರಕ್ಷಣೆ ಪ್ರತಿಯೊಬ್ಬ ಜವಾಬ್ದಾರಿ



**ಬಾಗಲಕೋಟೆ:** ಪರಿಸರ ಸಂರಕ್ಷಣೆಯಿಂದ ನಾಡು, ಕಾಡು ಎಲ್ಲವು ಉಳಿಯುತ್ತದೆ ಎಂದು ಬಿವಿವಿ ಸಂಘದ ಶಾಲಾ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ ಹೇಳಿದರು.

ತಾಲೂಕಿನ ಕಿರಸೂರ ಗ್ರಾಮದಲ್ಲಿ ಬಿವಿವಿ ಸಂಘದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಎನ್‌ಎಸ್–ಎಸ್ ಘಟಕಗಳ ಸಹಯೋಗದಲ್ಲಿ ಸೇವಾ ಭಾರತಿ ಟ್ರಸ್ಟ್ ರಜ–ತ ಮಹೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಸಿ ನೆಟ್ಟ ಮಾತ್ರ ಕಾರ್ಯಪೂರ್ಣಗೊಂಡಂತಲ್ಲ. ಅವುಗಳ ಬೆಳವಣಿಗೆಗೆ ಒತ್ತು ಕೊಡಬೇಕು. ಆ ಬಗ್ಗೆ ವಿದ್ಯಾರ್ಥಿಗಳೇ ಆಸಕ್ತಿ ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಸೇವಾ ಭಾರತಿ ಟ್ರಸ್ಟ್ ರಜತ ಮಹೋತ್ಸವ ಕಾರ್ಯಕ್ರಮದ ಪ್ರಾಂತ ಕಾರ್ಯದರ್ಶಿ ಡಾ. ಎಚ್.ಡಿ.ಪಾಟೀಲ ಮಾತನಾಡಿ, ಸೇವಾ ಭಾರತಿ ಟ್ರಸ್ಟ್ ರಾಜ್ಯಾದ್ಯಂತ ಸ ವ ಾ ಜ ವ ು ಖಿ ೦ ು ಾ ದ ಸಾಕಷ್ಟು ಕಾರ್ಯಗಳನ್ನು ಮಾಡುತ್ತಾ ಬರುತ್ತಿದೆ. ಈಗ 25 ವರ್ಷಗಳ ಸಾರ್ಥಕ ಸೇವೆ ಪೂರ್ಣಗೊಳಿಸಿದ್ದಕ್ಕಾಗಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ. ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ ಮುಂತಾದ ಕಾರ್ಯಗಳನ್ನು ಮಾಡಲು ಯೋಜಗಳನ್ನು ಹಾಕಿಕೊಳ್ಳಲಾಗಿದೆ. ಆ ನಿಟ್ಟಿನಲ್ಲಿ ಅನಗವಾಡಿಯಲ್ಲಿ 80ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ. ಕಿರಿಸೂರಿನಲ್ಲಿ ಅರವತ್ತಕ್ಕೂ ಹೆಚ್ಚು ಸಸ್ಯಗಳನ್ನು ನೆಡಲಾಗುವುದು ಎಂದು ಹೇಳಿದರು.

ಎನ್‌ಎಸ್‌ಎಸ್ ನೋಡಲ್ ಅsಕಾರಿ ಡಾ. ಮಾರುತಿ ಎ.ಪಾಟೋಳಿ, ಸೇವಾ ಭಾರತಿ ಟ್ರಸ್ಟ್ ಆಶ್ರಯಧಾಮದ ಚಂದ್ರು ಹೂಗಾರ ಇದ್ದರು.

# ಕಾಂಗ್ರೆಸ್ ಸರ್ಕಾರದಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮಾಜಕ್ಕೆ ಅನ್ಯಾಯ

● ವಾರ್ತಾಲೋಕ ವಾರ್ತೆ

**ಬಳ್ಳಾರಿ.ಅ 03** ದಲಿತ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಎಂದು ಹೇಳಿಕೊಂಡು ಚುನಾವಣೆ ಎದುರಿಸಿದ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ಎರಡು ಸಮುದಾಯಗಳನ್ನು ನಿರ್ಲಕ್ಷಿಸುತ್ತಾ ಬಂದಿದೆ, ಈ ಸಮುದಾಯಕ್ಕೆ ಮೀಸಲಿದ್ದ ಹಣವನ್ನು ಅಕ್ರಮವಾಗಿ ಬೇರೆ ಯೋಜನೆಗಳಿಗೆ ಬಳಸಿ ದಲಿತ ಪರ ಸರ್ಕಾರ ಎಂದು ಬೊಗಳೆ ಬಿಡುತ್ತ ದಲಿತರಿಗೆ ಅನ್ಯಾಯ ಮಾಡಿದೆ ಇದನ್ನು ನಿಲ್ಲಿಸಬೇಕೆಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾಧ್ಯಕ್ಷರಾದ ಬೈಲೂರು ಮಲ್ಲಿಕಾರ್ಜುನ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅವರು ಇಂದು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿ ಮಾತನಾಡಿ,

ಕಾಂಗ್ರೇಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಸ್.ಸಿ/ಎಸ್.ಟಿ, ಸಮುದಾಯಗಳಿಗೆ ಸೇರಿದ ಹಣವನ್ನು ದುರುಪಯೋಗ ಪಡಿಸಿಕೊಳ್ಳುತ್ತಾ ಆ ಎರಡು ಸಮಾಜಗಳನ್ನು ವಂಚಿಸುತ್ತ ಬಂದಿದೆ. ಕಳೆದ ಒಂದು ವರ್ಷದಿಂದ ಎಸ್.ಸಿ./ಎಸ್.ಟಿ. ಸಮುದಾಯಗಳ ಅಭಿವೃದ್ಧಿಗಾಗಿ ಖಅಖಕ/ಖಿಖಕ ಯೋಜನೆಗೆಂದು ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಸುಮಾರು 25,000 ಕೋಟಿ ರೂಪಾಯಿ ಹಣವನ್ನು ಅನ್ಯ ಕಾರ್ಯಕ್ಕೆ ಬಳಸಿ ದುರುಪಯೋಗ ಪಡಿಸಿಕೊಂಡಿದೆ. ಇದರಿಂದ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸರ್ಕಾರ ಅನ್ಯಾಯ ಮಾಡಿದೆ. ಸರ್ಕಾರಕ್ಕೆ ದಲಿತರ ಪರವಾಗಿ ನಿಜವಾದ ಕಾಳಜಿ ಇದ್ದಲ್ಲಿ ಕೂಡಲೇ ಆ 25000 ಕೋಟಿ ರೂಪಾಯಿ ಹಣವನ್ನು ನಿಗಮಕ್ಕೆ ಮರಳಿ ಪಡೆದುಕೊಳ್ಳಬೇಕು ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.



ಮೂಡಾ ಹಗರಣದಲ್ಲಿ ಪದೇ ಪದೇ ಮುಖ್ಯಮಂತ್ರಿಗಳ ಹೆಸರು ಕೇಳಿ ಬರುತ್ತಿರುವುದರಿಂದ ಅವರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭಾಗಿಯಾಗಿರುವ ಅನುಮಾನವಿದೆ, ಅಷ್ಟೇ ಅಲ್ಲದೆ ಅವರ ಮೇಲೆ ಲೋಕಾಯುಕ್ತ ಪೊಲೀಸರು ಮತ್ತು ಈಡಿ ಅಧಿಕಾರಿಗಳು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದಾರೆ, ಇದರ ನೈತಿಕ ಹೊಣೆ ಹೊತ್ತು ಮುಖ್ಯ ಮಂತ್ರಿಗಳು ರಾಜೀನಾಮೆ ನೀಡಬೇಕು, ತನಿಖೆಯನ್ನು ಎದುರಿಸಿ ಭ್ರಷ್ಟಚಾರದಿಂದ ಮುಕ್ತವಾಗಬೇಕು, ಇಲ್ಲವಾದಲ್ಲಿ ತನಿಕ ಅಧಿಕಾರಿಗಳಿಗೆ ಒತ್ತಡ ತಂದು ತನಿಖೆ ದಾರಿ ತಪ್ಪುವ ಸಂಭವವಿದೆ. ಕಾರಣ ಕೂಡಲೇ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ನೀಡಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಸೋಮು ಚಲುವಾದಿ, ಶರಣಪ್ಪ, ನಾಗೇಂದ್ರ, ಲಕ್ಷ್ಮೀದೇವಿ, ಸುಮಲತಾ, ಶ್ರೀದೇವಿ, ಲಕ್ಷ್ಮೀದೇವಿ, ತಿಪ್ಪಣ್ಣ, ಮಲ್ಲಿಕಾರ್ಜುನ, ರಮೇಶ, ಗೋವರ್ಧನ್, ಅಂಬರೀಶ್, ರಾಜು, ವಿರುಪಾಕ್ಷ, ನೂರು, ಕೊಳಗಲ್ ರಾಮಣ್ಣ ಸೇರಿದಂತೆ ಇತರರಿದ್ದರು.

# ಮಹಾತ್ಮಗಾಂಧೀಜಿ ಎಂದರೆ ಕೇವಲ ಹೆಸರಲ್ಲ,ಶಾಂತಿಯ ಸಂಕೇತ

● ವಾರ್ತಾಲೋಕ ವಾರ್ತೆ

**ಸಂಡೂರ್ :ಅ 3.** ಜಗತ್ತಿಗೆ ಈಗ ಏನು ಬೇಕಿದೆ ಎನ್ನುವುದನ್ನು ಗಮನಿಸಿದರೆ ಸ್ವಚ್ಚ ಮನಸ್ಸಿನಿಂದ ಗಾಂಧೀಜಿಯವರ ತತ್ವವಾಗಿದೆ . ಮಹಾತ್ಮ ಗಾಂಧೀಜಿ ಎಂದರೆ ಕೇವಲ ಹೆಸರಲ್ಲ ಅ ವಿಚಾರ ಜಾಗತಿಕ ಶಾಂತಿಯ ಸಂಕೇತ, ಅಹಿಂಸೆಯ ದ್ಯೋತಕ, ಬಡವನಲ್ಲೂ ದೇವರನ್ನು ಕಾಣುವ ಮಾನವೀಯ ನೆಲಗಟ್ಟು. ಈ ಎಲ್ಲಾ ಮೌಲ್ಯಗಳ ಒಟ್ಟು ರೂಪವೇ ಮಹಾತ್ಮ ಗಾಂಧೀಜಿ , ಅ ವಿಚಾರವಾಗಿ ರಾಷ್ಟ್ರಕ್ಕೆ ರಾಷ್ಟ್ರಪಿತರಾಗುವುದರ ಜೊತೆಗೆ ಬೇರೆ ದೇಶಗಳಿಗೆ ಅನುಕರಣಿಯ ವ್ಯಕ್ತಿತ್ವವನ್ನು ಹೊಂದಿದ್ದರು.

ಎಂದು ಸಂಡೂರಿನ ತಹಶೀಲ್ದಾರ್ ಕಛೇರಿಯ ಶಿರಸ್ತೇದಾರ್ ಕೆ.ಎಂ. ಶಿವಕುಮಾರ ತಿಳಿಸಿದರು.

ಅವರು ಪಟ್ಟಣದ ತಾಲೂಕು ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಮಹಾತ್ಮಗಾಂಧೀಜಿಯವರ ಜಯಂತಿಯನ್ನು ಉದ್ದೇಶಿಸಿ ಮಾತನಾಡಿ ಸಂಡೂರನ್ನು ಓಯಸಿಸ್ ಎಂದು ಬಣ್ಣಿಸಿದ್ದ ಮಹಾತ್ಮ ಗಾಂಧೀಜಿಯವರು ದೇವಸ್ಥಾನದ ಒಳ ಪ್ರವೇಶಕ್ಕೆ ಹರಿಜನರಿಗೆ ಘೋರ್ಪಡೆ ರಾಜವಂಶಸ್ಥರಿಂದ ಅವಕಾಶ ಕಲ್ಪಿಸಿದರು. ಬಾರತ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ಧ ಹೋರಾಡಿ ಉಪ್ಪಿನ ಚಳುವಳಿ,



ದಾಂಡೇಲಿ ಚಳುವಳೀ, ವಿವಿಧ ರೀತಿಯ ಚಳುವಳಿ ಮೂಲಕ ದೊಡ್ಡ ಕ್ರಾಂತಿಯನ್ನೇ ಮಾಡಿ ಕ್ರಾಂತಿಯ ಹರಿಕಾರರಾಗಿ ಬಾಲಗಂಗಾಧರ ತಿಲಕ್, ಸುಬಾಷ್ ಚಂದ್ರ ಬೋಸ್, ಭಗತ್ ಸಿಂಗ್ ಹಲವಾರು ಹೋರಾಟಗಾರರೊಡನೆ ಕೂಡಿಕೊಂಡು ಗುಲಾಮ, ದಾಸ್ಯದಲ್ಲಿದ್ದ ಭಾರತ ದೇಶವನ್ನು ಅ 15 ರಂದು 1947ಕ್ಕೆ ಮಧ್ಯರಾತ್ರಿ ಸ್ವತಂತ್ರ್ಯವನ್ನಾಗಿ ಮಾಡಿದ ಕೀರ್ತಿ ಮಹಾತ್ಮ ಗಾಂಧೀಜಿಯವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರು ದೇಶಕ್ಕೆ ಸ್ವಾತಂತ್ರ್ಯಕ್ಕಾಗಿ ಸತ್ಯ ಮತ್ತು ಅಹಿಂಸೆಯ ಹೋರಾಟದ ಅಸ್ತ್ರಗಳಿಂದ ನಮಗೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಅವರ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು ಎಂದು ತಹಶೀಲ್ದಾರ್ ಅನಿಲ್ ಕುಮಾರ್ ತಿಳಿಸಿದರು.

ಅವರು ಪಟ್ಟಣದ ತಾಲೂಕು ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಮಹಾತ್ಮಗಾಂಧೀಜಿಯವರ ಜಯಂತಿಯನ್ನು ಉದ್ದೇಶಿಸಿ ಮಾತನಾಡಿ ಬಾಲ್ಯದಲ್ಲಿ ಅವರು ಸತ್ಯ ಹರಿಶ್ಚಂದ್ರ ನಾಟಕದಿಂದ ಸತ್ಯವನ್ನು ಕಲಿತು ಅದನ್ನು ಬದುಕಿನ ಸಂಕಲ್ಪವನ್ನಾಗಿಸಿಕೊಂಡವರು, ಅವರು ನಿರಂತರವಾಗಿ ದೇಶಕ್ಕಾಗಿ, ಸಮಾಜಕ್ಕೆ, ಹರಿಜನರ ಉದ್ಧಾರಕ್ಕಾಗಿ ಹೋರಾಟ ಮಾಡಿ ಸಮಾನತೆಯ ಸಮಾಜವನ್ನು ಕಟ್ಟುವ ಮಹತ್ತರ ಕಾರ್ಯ ಮಾಡಿದರು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಕಛೇರಿಯ ಎಲ್ಲಾ ಸಿಬ್ಬಂದಿಗಳು ವಿವಿಧ ಇಲಾಖೆಯ ಅಧಿಕಾರಿಗಳು ಗಣ್ಯರು ಉಪಸ್ಥಿತರಿದ್ದರು.

# ಹೋಟೆಲ್ ಮಯೂರ ಭುವನೇಶ್ವರಿಯಲ್ಲಿ ನೂತನ ಬಾರ್ ಉದ್ಘಾಟನ

**ವಾರ್ತ ಲೋಕ ವಾರ್ತೆ**

ಹೊಸಪೇಟೆ ಅಕ್ಟೋಬರ್ 03 .ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲ್ ಮಯೂರ ಭುವನೇಶ್ವರಿ ಕಮಲಾಪುರ ಹಂಪಿ ಘಟಕದಲ್ಲಿ ಪ್ರವಾಸಿಗರಿಗೆ ಮತ್ತೊಂದು ಸೇವೆಯನ್ನು ಆರಂಭಿಸಿದ್ದು, ನೂತನ 'ಮಯೂರ ಬಾರ್'ನ್ನು ಕಲಬುರ್ಗಿ ಪ್ರವಾಸೋದ್ಯಮ ಇಲಾಖೆಯ ಪ್ರಭಾರಿ ಜಂಟಿ ನಿರ್ದೇಶಕರು ಆಗಿರುವ ಹೊಸಪೇಟೆ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರಾದ ಪ್ರಭುಲಿಂಗ ಎಸ್ ತಳಕೇರಿ ಅವರು ಅಕ್ಟೋಬರ್ 3ರಂದು ಉದ್ಘಾಟಿಸಿದರು.



ಇದೇ ವೇಳೆ ಹೋಟೆಲ್ ಮಯೂರ ಭುವನೇಶ್ವರಿ ವ್ಯವಸ್ಥಾಪಕರಾದ ಸುನಿಲ್ ಕುಮಾರ್ ಎಸ್ ಅವರು ಮಾತನಾಡಿ, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಾ ಕೆ.ವಿ.ರಾಜೇಂದ್ರ, ಪ್ರಧಾನ ವ್ಯವಸ್ಥಾಪಕರಾದ ಮಹೇಶಬಾಬು ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಹೆಚ್. ಎಸ್.ದೇವರಾಜು ಇವರ ನಿರ್ದೇಶನದಂತೆ ಹೋಟೆಲ್ ಮಯೂರ ಭುವನೇಶ್ವರಿ ಕಮಲಾಪುರ ಘಟಕಕ್ಕೆ ಆಗಮಿಸುವ ಪ್ರವಾಸಿಗರ ಹಾಗೂ ಆತಿತ್ಯ ಸೇವೆ ಪಡೆಯುವ ಅತಿಥಿಗಳಿಗೆ ಉತ್ತಮ ಸೇವೆಯನ್ನು ಒದಗಿಸುವ ಹಿತದೃಷ್ಟಿಯಿಂದ ದೇಶ–ವಿದೇಶಿ ಪ್ರವಾಸಿಗರು ಅತಿ ಹೆಚ್ಚಾಗಿ ಆಗಮಿಸುವ ಹಂಪಿಗೆ ಈ ಸುಸಜ್ಜಿತವಾದ ಸೇವೆಯನ್ನು ಇಂದಿನಿಂದ ಆರಂಭಿಸಲಾಗಿದ್ದು, ಇದರ ಸದುಪಯೋಗವನ್ನು ಸಾರ್ವಜನಿಕರು ಹಾಗೂ ಪ್ರವಾಸಿಗರುಪಡೆದುಕೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಜಯನಗರ ಟಿ.ಬಿ.ಡ್ಯಾಂಘಟಕದ ಹೋಟೆಲ್ ಮಯೂರ ವ್ಯವಸ್ಥಾಪಕರಾದ ಪ್ರಕಾಶ ಎಂ ಸೇರಿದಂತೆ ಹೋಟೆಲ್ ಮಯೂರ ಭುವನೇಶ್ವರಿ ಕಮಲಾಪುರ ಘಟಕದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಯುವ ಸಬಲೀಕರಣಕ್ಕೆ ಹೆಚ್ಚಿನ ಹಣ ಮೀಸಲಿಡಲು ಕೇಂದ್ರ ಸಚಿವರಿಗೆ ಮನವಿ

**ವಿಜಯಪುರ, :** ಯುವ ಸಬಲೀಕರಣಕ್ಕೆ ಬಜೆಟ್‌ನಲ್ಲಿ ಹೆಚ್ಚಿನಅನುದಾನಒದಗಿಸುವುದು, ಯುವ ಸಬಲೀಕರಣ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ಸೇರಿದಂತೆ ಯುವಕರ ಶ್ರೇಯೋಭಿವೃದ್ಧಿಗೆ ಸಂಬಂಧಿಸಿದ ಹಲವಾರು ಯುವಕರ ಪರ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಒತ್ತಾಯಿಸಿ ರಾಷ್ಟ್ರೀಯ ಯುವ ಸಲಹಾ ಸಮಿತಿ ಪದಾಧಿಕಾರಿಗಳ ನಿಯೋಗ ಕೇಂದ್ರ ಯುವ ಸಚಿವ ಮನ್ಸುಖ್ ಮಾಂಡವಿಯಾ ಅವರನ್ನು ನವದೆಹಲಿಯಲ್ಲಿರುವ ಶ್ರಮ ಶಕ್ತಿ ಭವನದಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿತು.

ಯುವಕರ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಮಹತ್ವದ ವಿಷಯಗಳನ್ನು ಇದೇ ಸಂದರ್ಭದಲ್ಲಿ ಚರ್ಚಿಸಲಾಯಿತು. ನಿಯೋಗದ ನೇತೃತ್ವ ವಹಿಸಿದ್ದ ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತರ ಫೆಡರೇಶನ್ ಅಧ್ಯಕ್ಷ ಡಾ. ಜಾವೀದ




ಜಮಾದಾರ ಮಾತನಾಡಿ, ಯುವ ಸಬಲೀಕರಣಕ್ಕೆಕಡಿಮೆ ಅನುದಾನ ವಿನಿಯೋಗಿಸಲಾಗುತ್ತಿದೆ, ಕ್ರೀಡಾ ಚಟುವಟಿಕೆಗಳಿಗೆ ದೊರಕುವ ಅನುದಾನ ಮಾದ–ರಿಯಲ್ಲಿಯೇ ದೊಡ್ಡ ಅನುದಾನ ಯುವ ಸಬಲೀಕರಣಕ್ಕೆ ಒದಗಿಸಿದರೆ ಯುವಕರ ವಿಕಾಸ ಸಾಧ್ಯವಾಗುತ್ತದೆ, ಯುವಕರ ವಿಕಾಸದಲ್ಲಿಯೇ ಭಾರತದ ವಿಕಾಸ ಅಡಗಿದೆ ಎಂದರು. ಪ್ರಶಸ್ತಿ ಪುರಸ್ಕೃತರು ತಾವು ಜಿಲ್ಲೆ ಮತ್ತು ರಾಜ್ಯಗಳಲ್ಲಿ ಸ್ವಯಂಪ್ರೇರಿತವಾಗಿ ಅನುಷ್ಠಾನಗೊಳಿಸುತ್ತಿರುವ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ವಿವ–ರಿಸಿದರು. ಈ ಉಪಕ್ರಮಗಳು ಸರ್ಕಾರದ ಯೋಜನೆಗಳನ್ನು ಉತ್ತೇಜಿಸುವಲ್ಲಿ ಮತ್ತು ಜಾಗೃತಿ ಮೂಡಿಸುವಲ್ಲಿ, ವಿಶೇಷವಾಗಿ ಗ್ರಾಮೀಣ ಜನರಲ್ಲಿ ರಾಷ್ಟ್ರದ ಅಭಿವೃದ್ಧಿಯಲ್ಲಿ ಹೆಚ್ಚು ಸಂಪೂರ್ಣವಾಗಿ ಭಾಗವಹಿಸಲು ಪ್ರೇರಣೆ ದೊರಕಿಸುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತಿದೆ ಎಂದರು.

ವಿಜಯಪುರ ಒಂದು ಐತಿಹಾಸಿಕ ನಗರಿಯಾಗಿದ್ದು,

ಇಲ್ಲಿ ವಿಮಾನ ನಿಲ್ದಾಣ ನಿರ್ಮಾಣಗೊಂಡಿದೆ. ಹೀಗಾಗಿ ವಿಜಯಪುರದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ, ರಾಷ್ಟ್ರೀಯ ಕ್ರೀಡಾ ಪ್ರಾಧಿಕಾರದ ವತಿಯಿಂದ ಉನ್ನತ ತರಬೇತಿ ಕೇಂದ್ರ ಪ್ರಾರಂಭಿಸುವಂತೆ ಜಾವೀದ ಜಮಾದಾರ ಈ ಸಭೆಯಲ್ಲಿ ಪ್ರಬಲವಾಗಿ ಒತ್ತಾಯಿಸಿದರು.

ಈ ಎಲ್ಲ ವಿಷಯ ಆಲಿಸಿದ ಕೇಂದ್ರ ಸಚಿವ ಮಾನ್ಸೂಖ್ ಮಾಂಡವೀಯ ಮಾತನಾಡಿ, ಯುವಕರುರಾಷ್ಟ್ರೀಯಅಭಿವೃದ್ಧಿಗೆ ನಿರ್ಣಾಯಕ ಸಂಪನ್ಮೂಲ, ಅವರ ಸಬಲೀಕರಣಕ್ಕೆ ಸರ್ಕಾರ ಸಂಪೂರ್ಣ ಬದ್ಧವಾಗಿದ್ದು ಈ ವಿಷಯದಲ್ಲಿ ಬದ್ಧತೆ ಪ್ರದರ್ಶಿಸಲಿದೆ ಎಂದರು.

ಇದೇ ಸಂದರ್ಭದಲ್ಲಿ ಮೈ ಭಾರತ್ ಪೋರ್ಟಲ್ ಅನ್ನು ಉತ್ತೇಜಿಸಲು ಮತ್ತು ಫಲಾನುಭವಿಗಳನ್ನು ನೋಂದಾಯಿಸಲು ಸಹಕಾರ ನೀಡಬೇಕು ಎಂದರು.

ಸಂಸದ ಹಾಗೂ ಯುವ ಕ್ರೀಡಾ ಮಂತ್ರಾಲಯದ ಸಂಸದೀಯ ಸ್ಥಾಯಿ ಸಮಿತಿ ಸದಸ್ಯ ಜಗನ್ನಾಥ ಸರ್ಕಾರ, ಎನ್.ವೈ.ಎ.ಎಫ್.ಐ. ರಾಷ್ಟ್ರೀಯ ಸಂಯೋಜಕ ಡಾ. ಅನುಜ್ ವಿಲಿಯಮ್ಸ್ ಸಭೆಯಲ್ಲಿ ಪಾಲ್ಗೊಂಡಿದ್ದರು.

# ಕೃಷಿ ಇಲಾಖೆಯ ಅಧೀನ ಕಾರ್ಯದರ್ಶಿ ಗುಂಡಿನಹೊಳೆ ಫಾರಂನಲ್ಲಿ ಸ್ಥಳ ಪರಿಶೀಲನೆ ನಡೆಸಿದರು

● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ3.** ಅತೀ ಹಿಂದುಳಿದ ತಾಲೂಕು ಅದರಲ್ಲೂ ಕೃಷಿಕರೇ ಹೆಚ್ಚಾಗಿರುವ ತಾಲೂಕಿನಲ್ಲಿ ಕೃಷಿ ವಿಜ್ಞಾನ ಕೇಂದ್ರ ಸ್ಥಾಪನೆಗೆ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು. ಪಟ್ಟಣದ ಹೊರವಲಯದ ಗುಂಡಿನ ಹೊಳೆ ಬೀಜೋತ್ಪಾದನಾ ಕೇಂದ್ರದಲ್ಲಿ ಗುರುವಾರ ಸ್ಥಳ ಪರಿಶೀಲನೆ ನಡೆಸಿ ಮಾತನಾಡಿದರು. ಪಟ್ಟಣದ ಹೊರವಲಯದ ಗುಂಡಿನ ಹೊಳೆ ಬೀಜೋತ್ಪಾದನಾ ಕೇಂದ್ರದಲ್ಲಿ ಕೃಷಿ ವಿಜ್ಞಾನ ಕೇಂದ್ರ ಸ್ಥಾಪನೆ ಮಾಡಲು ಕೃಷಿ ಇಲಾಖೆ ಅಧೀನ ಕಾರ್ಯದರ್ಶಿ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರಿಗೆ ಪತ್ರದ ಮೂಲಕ ತಿಳಿಸಿದ್ದಾರೆ.

ಕೃಷಿಯೇ ಮೂಲಧಾರವಾಗಿರುವ ಕೂಡ್ಲಿಗಿ ತಾಲೂಕಿನಲ್ಲಿ ಯಾವುದೇ ಕೈಗಾರಿಕೆಗಳಿಲ್ಲ, ಜಲ ಮೂಲಗಳು ಇಲ್ಲ ಇದರಿಂದ ಇಲ್ಲಿ ಮಳೆ ಬಂದರೆ ಮಾತ್ರ ಬೆಳೆ ಇಲ್ಲವಾದಲ್ಲಿ ಬದುಕು ದುಸ್ತರ, ಕೂಲಿ ಅರಸಿ ಅನೇಕ ತಾಂಡಗಳಿಂದ



ಕೂಲಿ ಕಾರ್ಮಿಕರು ಗುಳೇ ಹೋಗುವುದು ಸಾಮನ್ಯವಾಗಿದೆ ಎಂದು ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೃಷಿ ಸಚಿವ ಚಲುವರಾಯ ಸ್ವಾಮಿ ಅವರಿಗೆ ಇಲ್ಲಿನ ಪರಿಸ್ಥಿತಿ ಮನವರಿಕೆ ಮಾಡಿದ್ದೇನೆ. ಇದರಿಂದಾಗಿ ಹಿಂದುಳಿದ ಸಮುದಾಯವು ಹೆಚ್ಚಾಗಿ ವಾಸಿಸುವ ಇಲ್ಲಿ ಕೃಷಿ ವಿಜ್ಞಾನ ಕೇಂದ್ರ ಸ್ಥಾಪಿಸಲು ಒಪ್ಪಿದ್ದಾರೆ.

ಇದರಿಂದ ಕೃಷಿಕರಿಗೆ ವೈಜ್ಞಾನಿಕ ಪದ್ಧತಿಯ ಬೇಸಾಯಕ್ಕೆ ಬೇಕಾಗುವ ನೂತನ ತಳಿಗಳ ಬೀಜಗಳು, ಬೆಳೆಗಳಿಗೆ ರೋಗಭಾದೆ ಉಂಟಾದರೆ ವಿಜ್ಞಾನಿಗಳು ಸಂಶೋಧನೆ ಮಾಡಿ ಅದಕ್ಕೆ ಔಷದೋಪಚಾರ, ಹೊಸ ಹೊಸ ತಳಿಗಳ ಆವಿಷ್ಕಾರ ಮಾಡಿ ಈ ಭಾಗದ ರೈತರಿಗೆ ಪೂರಕವಾಗಿ ವಿಜ್ಞಾನ ಕೇಂದ್ರ ಕಾರ್ಯ ಮಾಡಲಿದೆ,

ಕೃಷಿ ವಿಜ್ಞಾನ ಕೇಂದ್ರ ಸ್ಥಾಪನೆ ನಂತರ ಈ ಭಾಗವು ಔದ್ಯೋಗಿಕವಾಗಿ, ಶೈಕ್ಷಣಿಕವಾಗಿ ಬೆಳೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಜಯನಗರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಮುದುಗಲ್ ಮಾತನಾಡಿ, ಕೃಷಿ ವಿಜ್ಞಾನ ಕೇಂದ್ರಕ್ಕೆ ಪೂರಕವಾದ ಸ್ಥಳ ಇಲ್ಲಿದೆ, ಜತೆಗೆ ಈ ಭಾಗದಲ್ಲಿ ರೈತರು ಶೇಂಗಾ, ಮೆಕ್ಕೆಜೋಳ ಸೇರಿದಂತೆ ನಾನಾ ತಳಿಯ ತರಕಾರಿ ಬೆಳೆಗಳನ್ನು ಯಥೇಚ್ಛವಾಗಿ ಬೆಳೆಯುತ್ತಾರೆ. ವಿಜ್ಞಾನ ಕೇಂದ್ರದಿಂದ ಹೊಸ ತಳಿಯ ಬೀಜ ಸಂಶೋಧನೆ ಜತೆ ರೈತ ತರಬೇತಿ ಕೇಂದ್ರವನ್ನು ಸ್ಥಾಪಿಸಿ, ಪ್ರಗತಿಪರ ರೈತರನ್ನು ಕರೆಯಿಸಿ ಇಲ್ಲಿನ ರೈತರಿಗೆ ತರಬೇತಿ ನೀಡಲಾಗುವುದು. ನುರಿತ 6 ವಿಜ್ಞಾನಿಗಳು ಇಲ್ಲಿ ಕಾರ್ಯ ನಿರ್ವಹಿಸಲಿದ್ದು, ಬೆಳೆಗಳನ್ನು ಬಿತ್ತಿದ ಬೀಜದಿಂದ ಪ್ರತಿ ಹಂತದಲ್ಲಿಯೂ ಅದರ ಬಗ್ಗೆ ಸಂಶೋಧನೆ ಮಾಡಿ ಇಲ್ಲಿನ ರೈತರಿಗೆ ಪೂರಕವಾಗಿ ಕಾರ್ಯ ನಿರ್ವಹಣೆ ಮಾಡುವರು ಇದರಿಂದ ಇಲ್ಲಿನ ರೈತರು ಹೆಚ್ಚಿನ ಇಳುವರಿ ಬೆಳೆಗಳನ್ನು ಬೆಳೆಯಲು ಅನುಕೂಲವಾಗುವುದು ಎಂದು ತಿಳಿಸಿದರು.

ಗುಂಡಿನ ಹೊಳೆ ಬೀಜೋತ್ಪಾದನಾ ಕೇಂದ್ರದಲ್ಲಿ 50 ಎಕರೆ ಭೂಮಿಯನ್ನು ನೀಡಲು ಕೃಷಿ ಇಲಾಖೆ ಅಧೀನ ಕಾರ್ಯದರ್ಶಿ ಸೂಚನೆ ನೀಡಿದ್ದು, ಶೀಘ್ರದಲ್ಲೇ ರಾಯಚೂರು ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯ ಅಡಿಯಲ್ಲಿ ಇಲ್ಲಿ ಕೃಷಿ ವಿಜ್ಞಾನ ಕೇಂದ್ರ ಸ್ಥಾಪನೆಯಾಗಲಿದೆ ಎಂದರು.

ಸಹಾಯಕ ಕೃಷಿ ನಿರ್ದೇಶಕ ಕೊಳ್ಳಿ ವಾಮದೇವ, ಹಡಗಲಿ ಕೃಷಿ ವಿಜ್ಞಾನಿಗಳಾದ ಸವಿತಾ, ಮಂಜುನಾಥ ಬಾನುವಳ್ಳಿ, ತಾಂತ್ರಿಕ ಅಧಿಕಾರಿ ಶ್ರವಣ್ ಕುಮಾರ್, ಕೃಷಿ ಅಧಿಕಾರಿ ಗುರು ಬಸವರಾಜ,ಮುಖಂಡರಾದ ಟಿ.ಜಿ.ಮಲ್ಲಿಕಾರ್ಜುನ ಗೌಡ, ಗುಡೇಕೋಟೆ ಬಷೀರ್, ಪಪಂ ಸದಸ್ಯ ಪೂರ್ಯಾ ನಾಯ್ಕ್, ಇದ್ದರು.

**ವರದಿ ಎಚ್ ವೀರಣ್ಣ.**

# ಸಿ ಎಸ್ ಪುರ ಶಾಲೆಯಲ್ಲಿ ಗಾಂಧಿ ಮತ್ತು ಶಾಸ್ತ್ರೀಜಿ ಜಯಂತಿ ಆಚರಣೆ



● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ3.** ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಚಂದ್ರಶೇಖರಪುರ ಗ್ರಾಮದ ಅಂಬೇಡ್ಕರ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಆಚರಿಸಲಾಯಿತು. ಬಳಿಕ ಮಾತನಾಡಿದ ಮುಖ್ಯಗುರುಗಳಾದ ಪಿ.ಉಮೇಶ್, ಗಾಂಧಿ ಮತ್ತು ಶಾಸ್ತ್ರೀಜಿಯವರು ಈ ದೇಶ ಕಂಡ ಮಹಾನ್ ವ್ಯಕ್ತಿಗಳಾಗಿದ್ದು, ದಿನಾ ದುರ್ಬಲರ, ಬಡವರ ಏಳಿಗೆಗಾಗಿ ಶ್ರಮಿಸಿದರು. ಅವರ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕಾಗಿದ್ದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.ನನ್ನ ಜೀವನವೇ ನನ್ನ ಸಂದೇಶ ಎಂದು ಜಗತ್ತಿಗೆ ಸಾರಿದ ಮಹಾತ್ಮ ಗಾಂಧೀಜಿ ಅವರು ತಮ್ಮ ಸರಳ ಜೀವನ ಹಾಗೂ ಆದರ್ಶಗಳ ಮೂಲಕ ಗುರುತಿಸಲ್ಪಡುತ್ತಾರೆ. ಅಹಿಂಸಾತ್ಮಕ ಹೋರಾಟದ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಅವರು ಇತರೆ ದೇಶಗಳ ಸ್ವತಂತ್ರ ಹೋರಾಟಕ್ಕೂ ಸ್ಪೂರ್ತಿಯಾದರು.

ಅದೇ ರೀತಿ ಸರಳ ಮತ್ತು ಸೌಜನ್ಯಯುತ ನಡವಳಿಕೆಯನ್ನು ಹೊಂದಿದ್ದ ಮಾಜಿ ಪ್ರಧಾನಿ ಲಾಲ್ ಬಹುದ್ದೂರ್ ಶಾಸ್ತ್ರಿ ಅವರು ಕೂಡ ದೇಶದ ಪ್ರಗತಿಗೆ ಶ್ರಮಿಸಿದರು. ಈ ಮಹಾನ್ ವ್ಯಕ್ತಿಗಳು ನಮಗೆಲ್ಲ ದಾರಿದೀಪವಾಗಿದ್ದು ಇವರ ತತ್ವಗಳನ್ನು ನಾವೆಲ್ಲರೂ ಪಾಲಿಸೋಣ ಎಂದರು.

ಈ ಸಂದರ್ಭದಲ್ಲಿ ಚಂದ್ರಶೇಖರಪುರ ಗ್ರಾಮದ ಅಂಬೇಡ್ಕರ್ ನಗರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಎಸ್ಡಿಎಂಸಿ ಅಧ್ಯಕ್ಷ ಕೆ.ಎ.ಶಿವಶಂಕರ್, ಮುಖ್ಯಗುರುಗಳಾದ ಪಿ.ಉಮೇಶ್, ಸಹಶಿಕ್ಷಕ ಶರಣಪ್ಪ,ಭರಮಲಿಂಗಪ್ಪ, ಜ್ಯೋತಿ, ಸೇರಿದಂತೆ ಎಸ್ಡಿಎಂಸಿ ಅಧ್ಯಕ್ಷ ಉಪಾಧ್ಯಕ್ಷರು ಸರ್ವ ಸದಸ್ಯರು, ಊರಿನ ಮುಖಂಡರು ಉಪಸ್ಥಿತರಿದ್ದರು.

**ವರದಿ ಎಚ್ ವೀರಣ್ಣ.**

# ಹೃದಯ ಖಾಯಿಲೆಗಳಿಗೆ ನಿರ್ಲಕ್ಷ?ಯ ಮಾಡದೇ ಚಿಕಿತ್ಸೆ ಪಡೆಯಿರಿ: ಡಿಹೆಚ್‌ಓ ಡಾ.ಯಲ್ಲಾ ರಮೇಶಬಾಬು

● ವಾರ್ತಾಲೋಕ ವಾರ್ತೆ

**ಬಳ್ಳಾರಿ,ಅ.03** ಃಹೃದಯ ಸಂಬಂಧಿತ ಯಾವುದೇ ಖಾಯಿಲೆಗಳಿಗೆ ನಿರ್ಲಕ್ಷ?ಯ ಮಾಡದೇ ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾ ಡಾ.ಯಲ್ಲಾ ರಮೇಶಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಘಟಕ ಸಹಯೋಗದಲ್ಲಿ ಕೌಲ್‌ಬಜಾರ್‌ನ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಹೃದಯ ದಿನ ಹಾಗೂ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ ಬುಧವಾರ ಆಯೋಜಿಸಿದ್ದ ಜಾಗೃತಿ ಹಾಗೂ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಹೃದಯಾಘಾತವಾಗುವುದು ಒಂದು ಭಯಾನಕ ಅನುಭವ. ಜೀವಕ್ಕೆ ಅಪಾಯಕಾರಿಯೂ ಹೌದು, ದೈನಂದಿನ ಒತ್ತಡದ ಜೀವನಶೈಲಿಯಲ್ಲಿ ಬದಲಾವಣೆಯೊಂದಿಗೆ ಮಾನಸಿಕ ಒತ್ತಡವನ್ನು ಸೂಕ್ತವಾಗಿ ನಿಭಾಯಿಸುವ ಜೊತೆಗೆ ನಿಯಮಿತ ವ್ಯಾಯಾಮಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಕುಟುಂಬದ ಸದಸ್ಯರಲ್ಲಿ ಹೃದಯ ಸಂಬಂಧಿತ ಖಾಯಿಲೆಗಳಿದ್ದರೆ ಅಥವಾ ಅಧಿಕ ರಕ್ತದೊತ್ತಡ, ಸಕ್ಕರೆ ಕಾಯಿಲೆ, ನಿರಂತರ ಧೂಮಪಾನ, ಅಧಿಕ ಬೊಜ್ಜು, ಮದ್ಯಸೇವನೆ, ಹೈ ಕೊಲೆಸ್ಟ್ರಾಲ್ ಇದ್ದಲ್ಲಿ ಹೃದಯ ಸಂಬಂಧಿತ ಕಾಯಿಲೆಗೆ ಬೇಗನೆ ತುತ್ತಾಗಬಹುದು. ಹಾಗಾಗಿ ಕನಿಷ್ಟ 30 ನಿಮಿಷಗಳ ಸರಳ ವ್ಯಾಯಾಮ, ಆಹಾರದಲ್ಲಿ ಕಡಿಮೆ ಕೊಬ್ಬಿನಾಂಶ ಬಳಸಬೇಕು. ಧ್ಯಾನ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಒಳ್ಳೆಯದು ಎಂದು



ಅವರು ತಿಳಿಸಿದರು.

ಒಂದು ವೇಳೆ ವೈದ್ಯರು ಸೂಚಿಸಿದಲ್ಲಿ ನಿಯಮಿತ ಔಷಧಿ ಸೇವನೆಯೊಂದಿಗೆ ಸದಾ ಲವಲವಿಕೆಯಿಂದ ಇರುವ ಮೂಲಕ ಕಾಯಿಲೆ ದೂರಗೊಳಿಸಬಹುದಾಗಿದೆ ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ.ವಿ.ಕೆ ಅವರು ಮಾತನಾಡಿ, ಹೃದಯ ಸಂಬಂಧಿತ ಕಾಯಿಲೆಗಳ ಜೊತೆ ಜೊತೆಗೆ ಹಿರಿಯ ನಾಗರಿಕರ ಆರೈಕೆಯು ಮುಖ್ಯವಾಗಿದ್ದು, ಸಾಮಾನ್ಯವಾಗಿ ವಯಸ್ಸಾದಂತೆ ಕಣ್ಣಿನಪೊರೆ, ಕಿವುಡುತನ, ಅಧಿಕ ರಕ್ತದೊತ್ತಡ, ಖಿನ್ನತೆ, ನರದೌರ್ಬಲ್ಯ ರೋಗ, ದೇಹದ ಭಂಗಿಯಲ್ಲಿ ಅಸ್ಥಿರತೆ, ಮಲಬದ್ಧತೆ ಕಾಣಿಸಿಕೊಳ್ಳುವುದು ಸಹಜವಾಗಿದೆ ಎಂದರು.

ಇದಕ್ಕಾಗಿ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ವಿಶೇಷ ಕ್ಲಿನಿಕ್ ಸೇವೆಯನ್ನು ಜಿಲ್ಲಾ ಅಸ್ಪತ್ರೆ, ತಾಲೂಕಾ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುವುದು. ಈ ಸಂದರ್ಭದಲ್ಲಿ ಪಿಸಿಯೋಥೆರಪಿ ಹಾಗೂ ಪೋಷಕರೊಂದಿಗೆ ಆಪ್ತಸಮಾಲೊಚನೆ ಮಾಡಲಾಗುವುದು, ಗ್ರಾಮೀಣ ಪ್ರದೇಶಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ಸಹ ನೀಡಲಾಗುವ ಪ್ರಾಥಮಿಕ ಹಂತದ ಸೇವೆಗಳನ್ನು ಪಡೆಯಬೇಕು ಎಂದು ವಿನಂತಿಸಿದರು.

*ಉಚಿತ ಆರೋಗ್ಯ ತಪಾಸಣೆ:*

ಮಹಾನಗರಪಾಲಿಕೆ ಉಪಮೇಯರ್ ಡಿ.ಸುಕುಂ ಅವರು ಉಚಿತ ಆರೋಗ್ಯ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿದರು.

ನಂತರ ಕೌಲ್‌ಬಜಾರ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ನರಸಿಂಹಮೂರ್ತಿ ಹಾಗೂ ಜಿಲ್ಲಾ ಆಸ್ಪತ್ರೆಯ ಫಿಜಿಷಿಯನ್ ಡಾ.ಜ್ಞಾನ ಅಭಿಲಾಷ್ ಅವರ ನೇತೃತ್ವದಲ್ಲಿ ಜಿಲ್ಲಾ ಎನ್‌ಸಿಡಿ ಘಟಕದ ತಂಡವು 101 ಜನರ ಪರೀಕ್ಷೆ ಮಾಡಲಾಗಿ, ಇವರಲ್ಲಿ ಹೊಸದಾಗಿ 09 ರಕ್ತದೊತ್ತಡ, 01 ಸಕ್ಕರೆ ಕಾಯಿಲೆ ಇರುವವರು ಪತ್ತೆಯಾಗಿದ್ದು, 02 ಜನರಿಗೆ ಇಸಿಜಿ ಪರೀಕ್ಷೆಗಳನ್ನು ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ಆಡಳಿತ ವೈದ್ಯಾಧಿಕಾರಿ ಡಾ.ನರಸಿಂಹಮೂರ್ತಿ, ತಜ್ಞವೈದ್ಯರಾದ ಡಾ.ಜ್ಞಾನ ಅಭಿಲಾಷ್, ಡಾ.ರಹೀಮಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಎನ್‌ಬಿಸಿ ಜಿಲ್ಲಾ ಸಲಹೆಗಾರರಾದ ಡಾ.ಜಬೀನಾ ತಾಜ್, ಪ್ರಶಾಂತ್, ಸಿಬ್ಬಂದಿಯರಾದ ಡಿ.ಸುನೀತಾ, ಅರುಣ್‌ಕುಮಾರ್, ರವೀಂದ್ರರೆಡ್ಡಿ, ಗಂಗಾ ಭವಾನಿ, ರುಕ್ಮಿಣಿ, ರೇಖಾ, ಹೊನ್ನೂರಮ್ಮ, ಈಶ್ವರಮ್ಮ, ಚಂದ್ರ ನಾಯ್ಕ್, ಅನುಶ್ರೀ ಸೇರಿದಂತೆ ಇತರರು ಇದ್ದರು.

VARTHALOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com